ಅಧ್ಯಕ್ಷರು.—ಮಾನ್ಯ ಸದಸ್ಯರು ಈ ಬಗ್ಗೆ ಕಾಲ್ ಅಟೆನ್ಷನ್ ನೋಟೀಸ್ ಕಳುಹಿಸಿದ್ದಾರೆ ಆದ್ದರಿಂದ ಆ ಬಗ್ಗೆ ಮಾನ್ಯ ಮಂತ್ರಿಗಳು ಏನಾದರೂ ಹೇಳುವುದು ಇದ್ದರೆ ಹೇಳಬಹುದು.

SRI MOHAMMAD ALI.—Madam Speaker, it has not come to me. I will try to find it out and let the House know tomorrow.

Revival of Inam Abolition Enactment

ಶ್ರೀ ಎಂ ಬಿ. ರಾಮಸ್ವಾಮಿ (ಆನೇಕಲ್).—ಅಧ್ಯಕ್ಷರೇ, ಕಳೆದ ಅಧಿವೇಶನದಲ್ಲಿ ಮಾನ್ಯ ರೆವಿನ್ಯೂ ಮಂತ್ರಿಗಳು ಕೋಟಿ, ತಳವಾರರು ಮತ್ತು ನೀರಗಂಟಿಗಳ ಜಮೀನಿನ ಬಗ್ಗೆ ಒಂದು ಹೇಳಿಕೆಯನ್ನು ಮಾಡುತ್ತೇನೆ ಎಂದು ಹೇಳಿದ್ದರು. ಮಾನ್ಯ ಮುಖ್ಯ ಮಂತ್ರಿಗಳು ಇದ್ದಿದ್ದಾರೆ. ಹಿಂದೆ 25ನೇ ಡಿಸೆಂಬರ್ 1975ರಲ್ಲಿ ಆರ್ಡಿನೆನ್ಸ್ ತಂದರು. ಮಾನ್ಯ ಮುಖ್ಯ ಮಂತ್ರಿಗಳೂ ಅದನ್ನು ಒಪ್ಪಿಕೊಂಡಿದ್ದಾರೆ. ಇದರ ಬಗ್ಗೆ ಒಂದು ಹೇಳಿಕೆಯನ್ನು ಮಾಡುವುದರ ಜೊತೆಗೆ ಬಿಲ್ಲನ್ನು ಇಂಟರ್‌ಡ್ಯೂಸ್ ಮಾಡಬೇಕು ಏಕೆಂದರೆ ಹರಿಜನ-ಗಿರಿಜನರು ಲಕ್ಷಾಂತರ ರೂಪಾಯಿ ಬೆಲೆಬಾಳುವ ಜಮೀನನ್ನು ಕಳೆದುಕೊಂಡು ಕಷ್ಟದಲ್ಲಿದ್ದಾರೆ. ಇನಾಮಾಬಾಲಿಷನ್ ಬಿಲ್ ಲ್ಯಾಪ್ಸ್ ಆಗಿದೆ, ಅದನ್ನು ದಯಮಾಡಿ ಇಂಟರ್‌ಡ್ಯೂಸ್ ಮಾಡಿಸಿ ಸಹಾಯವಾಗಬೇಕು ಎಂದು ಮಾನ್ಯ ಮುಖ್ಯ ಮಂತ್ರಿಗಳನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

Taking up Some Subject

ಶ್ರೀ ಟಿ.ಎಂ ಮಂಜುನಾಥ್.—ನಿನ್ನೆ ಸರ್ಕಾರದವರು ಮಳವಳ್ಳಿ ಸಹಕಾರ ಸಂಘದ ಬಗ್ಗೆ ಒಂದು ಹೇಳಿಕೆಯನ್ನು ಕೊಡುತ್ತೇವೆಂದು ಹೇಳಿದ್ದರು. ಹೋದಸಲ ಶುರು ಮಾಡಿದ್ದಾರೆ.

ಅಧ್ಯಕ್ಷರು.—ಈಗ ಸಭೆಯಲ್ಲಿ ಸಂಬಂಧಪಟ್ಟ ಮಿನಿಸ್ಟರ್ ಇಲ್ಲ. ಇವತ್ತು ಹೇಳಿಕೆ ಮಾಡುತ್ತೇನೆಂದು ಹೇಳಿದ್ದರೆ?

ಶ್ರೀ ಟಿ.ಎಂ. ಮಂಜುನಾಥ.—ಮಾನ್ಯ ಚನ್ನಬಸಪ್ಪನವರು ಇದ್ದರು, ಇವತ್ತು ಹೇಳಿಕೆ ಕೊಡಿಸುತ್ತೇನೆಂದು ಹೇಳಿದರು. ಓದುವುದಕ್ಕೆ ತಂದಿದ್ದರು ಎಂದು ಕಾಣುತ್ತದೆ.

ಅಧ್ಯಕ್ಷರು.—ಅದರ ಬಗ್ಗೆ ಏನಿದೆಯೋ ನೋಡಿಸಿ, ನಾಳೆ ಓದಿಸುತ್ತೇನೆ.

ಶ್ರೀ ಕೊಣಂದೂರು ಲಿಂಗಪ್ಪ.—ಅಧಿವೇಶನ ಆರಂಭವಾದಾಗ ಮಾನ್ಯ ವಿ.ಎಲ್. ಪಾಟೀಲರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಸದನ ಮುಗಿಯುವುದರೊಳಗೆ ಖಚಿತವಾದ ನಿರ್ಧಾರಕ್ಕೆ ಬಂದು ಹೇಳುತ್ತೇನೆ ಎಂದು ಹೇಳಿದ್ದರು, ಇನ್ನೂ ಹೇಳಲಿಲ್ಲ. ಆದ್ದರಿಂದ ಯಾವಾಗ ಹೇಳುತ್ತಾರೆಂದು ಸ್ಪಷ್ಟವಾದರೆ ಒಳ್ಳೆಯದು.

ಶ್ರೀ ಡಿ. ದೇವರಾಜ ಅರಸ್.—ಕೆಲವು ದಿವಸಗಳಲ್ಲಿ ಡಿಸಿಷನ್ ತೆಗೆದುಕೊಳ್ಳುತ್ತೇನೆ.

ಶ್ರೀ ಎಚ್ ಡಿ. ದೇವೇಗೌಡ.—ನಮ್ಮ ಸ್ನೇಹಿತರಿಗೆ ನಾಳೆ ನಮ್ಮ ಸದನದ ಕಾರ್ಯಕ್ರಮದ ಬಗ್ಗೆ ವಿಷಯ ಗೊತ್ತಾಗಿಲ್ಲ.

ಅಧ್ಯಕ್ಷರು.—ಇವತ್ತಿನ ಕೊನೆಯಲ್ಲಿ ನಾಳೆ ಪ್ರೋಗ್ರಾಂ ಏನು ಎನ್ನುವುದನ್ನು ಪ್ರಕಟಣೆ ಮಾಡುತ್ತೇನೆ.

Notice of Question of Privilege

re : Newspaper item in Udayavani about K.M.C.

†ಶ್ರೀ ಎಚ್ ಡಿ. ದೇವೇಗೌಡ (ಹೊಳೇನರಸೀಪುರ).—ಮಾನ್ಯ ಸಭಾಧ್ಯಕ್ಷಿಣಿಯವರೇ ನಾವು ನಿನ್ನೆ ಈ ಸದನದಲ್ಲಿ ಕಸ್ತೂರಬಾ ಮೆಡಿಕಲ್ ಕಾಲೇಜಿನ ಸಂಬಂಧದಲ್ಲಿ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಿದೆವು. ಈ ಸದನದ ಕಾರ್ಯಕಲಾಪ ಮುಗಿದ ಮೇಲೆ ದಿನಾಂಕ 12ನೇ ಜುಲೈ

1967ರಿಂದ 14ನೇ ಜುಲೈ 1977 ಈ ಮೂರು ದಿವಸಗಳ ಉದಯವಾಣಿ ಪತ್ರಿಕೆಯಲ್ಲಿ 3 ಲೇಖನಗಳನ್ನು ಬರೆದಿದ್ದಾರೆ. ಬಹುಶ ಈ ಲೇಖನಗಳನ್ನು ಬರೆದಿರತಕ್ಕವರು ಸಿದ್ಧಾರ್ಥ ಎಂದು, ಇದು ಅವರ ಪೆನ್ ನೇಂ ಇರಬೇಕು ಎಂದು ಕಾಣುತ್ತದೆ. ಅಥವಾ ನಿಜವಾದ ಹೆಸರೋ ಏನೋ ಗೊತ್ತಿಲ್ಲ ಒಂದನೆಯ ಶಿರೋನಾಮೆ, ಖಾಸಗೀ ಕಾಲೇಜುಗಳ ಪಾತ್ರ ವಿವೇಚನೆ ಎರಡನೆಯದು ಆರೋಗ್ಯ ಸಚಿವರುಗಳ ಆಟೋಪ ಮೂರನೆಯದು ನಮ್ಮ ವೈದ್ಯಕೀಯ ಪರಂಪರ ಈ 3 ಶಿರೋನಾಮೆಗಳನ್ನು ಕೊಡುವುದರ ಮುಖೇನ 3 ದಿವಸಗಳ ಪತ್ರಿಕೆಯಲ್ಲಿ ಅವರು 3 ಲೇಖನಗಳನ್ನು ಬರೆದಿದ್ದಾರೆ. ಸಿದ್ಧಾರ್ಥ ಎನುವುದು ಅವರ ಪೆನ್ ನೇಂ ಎಂದು ತೋರುತ್ತದೆ. ಈ ಲೇಖನಗಳನ್ನು ಬರೆದಿದ್ದಾರೆ ಇದರ ಬಗ್ಗೆ ನಾವು ವಿಚಾರ ಮಾಡಬೇಕಾಗುತ್ತದೆ, ಅಷ್ಟೇ ಅಲ್ಲ ಪ್ರಿವಿಲೇಜ್ ಮೋಷನ್ ಕಳಿಸಿದ ಮೇಲೆ "ಕತ್ತಲೆ ಪ್ರಕರಣ ಬೆಳಕಿಗೆ, ಎಂದು ಪ್ರಜಾವಾಣಿ ಪತ್ರಿಕೆಯಲ್ಲಿ ಬಂದಿದೆ ಕತ್ತಲೆ ಪ್ರಕರಣವನ್ನು ಬೆಳಕಿಗೆ ತರತಕ್ಕದ್ದರಲ್ಲಿ ಈ ಸದನದಲ್ಲಿ ಸದಸ್ಯರು ಪ್ರಯತ್ನ ಮಾಡಿದರೆ, ಪಾಪ ಅವರಿಗೆ ಇದು ಚುಚ್ಚಿತು ಎಂದು ಕಾಣುತ್ತದೆ, ಈ 3 ಲೇಖನಗಳನ್ನು ಬರೆದಿರತಕ್ಕ ಪ್ರಭಾವಿತ ವ್ಯಕ್ತಿಗಳು ಯಾರಿದ್ದಾರೆ ಅವರ ಹೆಸರನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ, ಅವರು ಬೀದಿಯೊಳಗೆ ಹೋದಾಗ ನಾವೂ ಕೂಡ ಹೋಗಬೇಕಾಗುತ್ತದೆ. ಏಕೆಂದರೆ ಈ ಸದನದ ಸದಸ್ಯರಿಗೆ ಅವರಿಗಿಂತ ಹೆಚ್ಚು ಹಕ್ಕುಬಾಧ್ಯತೆಗಳಿವೆ, ನಾವು ಎಂದೂ ಅವರ ಅಡಿಯಾಳುಗಳಾಗಲಿಕ್ಕೆ ಸಾಧ್ಯವಿಲ್ಲ,

ಅಧ್ಯಕ್ಷರು.— ಡಿಫೆಂಡ್ ಮಾಡಲಿಕ್ಕೆ ಇಲ್ಲ ಇಲ್ಲದೇ ಇರತಕ್ಕಂಥ ವ್ಯಕ್ತಿಗಳ ಹೆಸರನ್ನು ಹೇಳುವುದು ಸೂಕ್ತವಲ್ಲ.

ಶ್ರೀ ಎಚ್.ಡಿ. ದೇವೇಗೌಡ.—ನಾನು ನಿನ್ನೆ ಒಂದು ಸೂಚನೆಯನ್ನು ಕೊಟ್ಟಿದ್ದೇನೆ. ಈ ದಿನಪತ್ರಿಕೆಯಲ್ಲಿ ಕತ್ತಲೆ ಪ್ರಕರಣವನ್ನು ಬೆಳಕಿಗೆ ತರಲಿಕ್ಕೆ ಪ್ರಯತ್ನ ಮಾಡಿದ್ದಾರೆ, ಇದರ ಬಗ್ಗೆ ಎಲ್ಲಾ ವಿವರಣೆಗಳನ್ನು ನಾನು ಆಮೇಲೆ ಕೊಡುತ್ತೇನೆ. ಈ ವಿಷಯವನ್ನು ಕೂಲಂಕಷವಾಗಿ ಚರ್ಚೆ ಮಾಡಬೇಕಾಗುತ್ತದೆ. ಪತ್ರಿಕೆಯಲ್ಲಿ ಎಷ್ಟು ದೂರ ಈ ಸದನದ ಕಾರ್ಯಕಲಾಪದ ಬಗ್ಗೆ ತಮ್ಮ ಒಂದು ಕಟುಟೀಕೆಯನ್ನು ವ್ಯಕ್ತಪಡಿಸಿದ್ದಾರೆ, ಈ ಲೇಖನದಲ್ಲಿ ಮತ್ತು ಸದನದ ಸದಸ್ಯರ ಬಗ್ಗೆ ಹಾಗೂ ಸಚಿವರುಗಳ ಬಗ್ಗೆ ಎಷ್ಟು ಲಘುವಾಗಿ ಈ ಲೇಖನದಲ್ಲಿ ಪ್ರಸ್ತಾಪ ಮಾಡಿದ್ದಾರೆ, ಆ ಎಲ್ಲಾ ವಿಷಯಗಳನ್ನೂ ಕೂಲಂಕುಷವಾಗಿ ಚರ್ಚೆ ಮಾಡಬೇಕಾಗುತ್ತದೆ. ಆದುದರಿಂದ ದಯಮಾಡಿ ಇದರ ಬಗ್ಗೆ ನಾನು ಏನು ಸೂಚನೆಯನ್ನು ಕೊಟ್ಟಿದ್ದೇನೆ ಅದನ್ನು ತೆಗೆದುಕೊಳ್ಳಲಿಕ್ಕೆ ಅನುಮತಿಯನ್ನು ಕೊಡಬೇಕು ಎಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಅನುಮತಿ ಕೊಡಬೇಕಾದರೆ ಸಮಾಧಾನವಾಗಬೇಕಲ್ಲ.

†ಶ್ರೀ ಎಚ್. ಸಿದ್ದವೀರಪ್ಪ (ಆರೋಗ್ಯ ಶಾಖೆಯ ಮಂತ್ರಿಗಳು).- ಮಾನ್ಯ ಅಧ್ಯಕ್ಷಿಣಿಯವರೇ ನಿಮ್ಮ ಆಫೀಸಿನಿಂದ ನನಗೆ ಒಂದು ಪತ್ರ ಬಂದಿದೆ. ಈ ರೀತಿ ನಮ್ಮ ಸ್ನೇಹಿತರು ಒಂದು ಪ್ರಿವಿಲೇಜ್ ಮೋಷನ್ ಕೊಟ್ಟಿದ್ದಾರೆ ಎಂದು ನೋಟೀಸ್ ಕೊಟ್ಟಿದ್ದಾರೆ ಬಹುಶಃ ಏನೆಂದರೆ, ಇದರಲ್ಲಿ 12,13 ಮತ್ತು 14ನೇ ತಾರೀಖುಗಳಲ್ಲಿ ಇದರ ಬಗ್ಗೆ ಉದಯವಾಣಿ ಪತ್ರಿಕೆಯಲ್ಲಿ ಬರೆದಿದ್ದಾರೆ. ನನ್ನ ಹೆಸರನ್ನು ಸ್ಪಷ್ಟವಾಗಿ ನಮೂದಿಸಿದ್ದಾರೆ. ಶ್ರೀ ಖಾನ್ ಚನ್ನಬಸಪ್ಪನವರ ಹೆಸರನ್ನೂ ಕೂಡ ಬೇರೆ ರೂಪದಲ್ಲಿ ಸೇರಿಸಿದ್ದಾರೆ. ಅದರಲ್ಲಿ ಏನು ಹೇಳಿದ್ದಾರೆಂದರೆ, ನಾನು ಮೆಡಿಕಲ್ ವಿಶ್ವವಿದ್ಯಾನಿಲಯ ಮಾಡಲಿಕ್ಕೆ ಪ್ರಯತ್ನ ಮಾಡಿದೆ, ಅದರಲ್ಲಿ ನಾನು ವೈಸ್ ಛಾನ್ಸಲರ್ ಆಗಬೇಕು ಎನ್ನತಕ್ಕಂಥ ಆಕಾಂಕ್ಷೆಯನ್ನಿಟ್ಟುಕೊಂಡು ಅದನ್ನು ಮಾಡಿದೆ ಎಂದು ಹೇಳಿದ್ದಾರೆ. ಬಹುಶ ಈ ಬಿಲ್ ಕ್ಲಾಸಸ್‌ನ್ನು ನೋಡಿದರೆ ಅದರಲ್ಲಿ ಡಾಕ್ಟರ್ ಅಲ್ಲದೆ ಯಾರೂ ಕೂಡ ವೈಸ್-ಛಾನ್ಸಲರ್ ಆಗಲಿಕ್ಕೆ ಬರುವುದಿಲ್ಲ ಆದುದರಿಂದ ಅಸತ್ಯವಾದ ಅಸಂಬದ್ಧವಾದ ವಿಷಯಗಳನ್ನು ಸೇರಿಸಿ ಉದಯವಾಣಿ ಪತ್ರಿಕೆಯಲ್ಲಿ ಬರೆದಿದ್ದಾರೆ. ನನ್ನ ಮೇಲೆ ಹೊಟ್ಟೆಕಿಚ್ಚು ಇಟ್ಟುಕೊಂಡು ತಮ್ಮ ಹೊಟ್ಟೆ ಉರಿಯನ್ನು ಈ ಮೂಲಕ ತೀರಿಸಿಕೊಂಡಿದ್ದಾರೆ ಎಂದು ಸ್ಪಷ್ಟವಾಗಿ ಅರ್ಥಮಾಡಿಕೊಳ್ಳಬಹುದು. ಮತ್ತೆ ಪ್ರಜಾವಾಣಿ ಪತ್ರಿಕೆಯಲ್ಲಿ "ಕತ್ತಲೆ ಪ್ರಕರಣ ಬೆಳಕಿಗೆ, ಎಂದು ಹೇಳಿದ್ದಾರೆ. ಅಂದರೆ ನಾನು ರೂಲ್ಸನ್ನು ಬಿಟ್ಟು 1973-74ರಲ್ಲಿ ಅಡ್ಮಿಷನ್ ಮಾಡಿಸಿದೆ, ಎಂದು ಪ್ರತ್ಯೇಕವಾಗಿ ನೇರವಾಗಿ ಆಪಾದನೆಯನ್ನು ಇದರಲ್ಲಿ ಮಾಡಿದ್ದಾರೆ.

ಈ ಪತ್ರಿಕೆಯಲ್ಲಿ ಹಾಕಿರತಕ್ಕಂಥಾ ವಿಷಯ ಸುಳ್ಳು ಎಂದರೆ ತಪ್ಪಾಗುತ್ತದೆ ಎಂದು ಕಾಣುತ್ತದೆ. ನಿಜವಾದುದಲ್ಲ ಸತ್ಯಕ್ಕೆ ದೂರವಾದುದು. ನನಗೆ ಸಂಬಂಧವಿಲ್ಲ. ಬಹುಶಃ ಬೆಳಗಾವಿನಲ್ಲಿ ಬಂತಲ್ಲ ಅದೇ ಮಾದರಿಯಲ್ಲಿ ಬಂದಿದೆ. ಸೀಟು ಕೊಡಿ ಎಂದು ಕೇಳಿದೆವು ಎಂದು ಬಂದಿದೆ ಇದು ಸತ್ಯಕ್ಕೆ ದೂರವಾದುದು. ನಾನು ಮೊದಲು ಆರೋಗ್ಯ ಮಂತ್ರಿ ಆಗಿದ್ದಾಗಲೂ ನನ್ನ ಮೇಲೆ ಬೆಂಕಿ ಕಾರುತ್ತಾ ಇದ್ದರು. ಇವರು ಮಾಡತಕ್ಕಂಥಾ ಪ್ರತಿಯೊಂದನ್ನೂ ನಾನು ಪ್ರತಿಭಟಿಸುತ್ತಾ ಇದ್ದೆ. ಮೆಡಿಕಲ್ ಯೂನಿವರ್ಸಿಟಿ ಬಿಲ್ ಮೊಟಕು ಗೊಳಿಸಲಿಕ್ಕೆ ಪ್ರೈವೇಟ್ ಗ್ರೂಪಿನವರೇ ಮೂಲ ಕಾರಣ ಎಂದು ನನಗೆ ಪರ್ಸನಲ್ಲಾಗಿ ಗೊತ್ತಾಗಿದೆ. ಆದರಲ್ಲಿ ಪ್ರೈವೇಟ್ ಮೆಡಿಕಲ್ ಕಾಲೇಜುಗಳನ್ನೂ ಸೇರಿಸಿದ್ದೇನೆ. ಅದು ಬಂದಿದ್ದರೆ ನಮ್ಮ ರಾಜ್ಯಕ್ಕೆ ಒಳ್ಳೆಯ ಹೆಸರು ಬರುತ್ತಿತ್ತು. ಅಲ್ಲದೆ ಪ್ರೈವೇಟ್ ಮೆಡಿಕಲ್ ಕಾಲೇಜುಗಳೂ ಕಂಟ್ರೋಲ್‌ನಲ್ಲಿ ಬರುತ್ತಾ ಇದ್ದವು. 1973-74ರ ಅಡ್ಮಿಷನ್ ಅನ್ನು ಕತ್ತಲು ಕೋಣೆಯಲ್ಲಿ ಮಾಡಿದ್ದೇನೆ ಎಂದು ಅಸತ್ಯವಾದ, ಮಾತುಗಳನ್ನು ಹಾಕಿದ್ದಾರೆ. ಇವರು ಹೀಗೆ ಪ್ರಚಾರವನ್ನು ಮಾಡಿರುವುದರಿಂದ ನನಗಂತೂ ವಿಷಾದವಾಗುತ್ತಿದೆ.

ಪ್ರಜಾವಾಣಿ ಮತ್ತು ಉದಯವಾಣಿ ಪತ್ರಿಕೆಗಳಲ್ಲಿ ಬಂದಿರುವುದನ್ನು ನೋಡಿದರೆ ನಿಜವಾಗಿಯೂ ನಾವು ಈ ಸದನದಲ್ಲಿ ಕೆಲಸ ಮಾಡುವುದಕ್ಕಾಗುವುದಿಲ್ಲವೆಂದು ಕಾಣುತ್ತದೆ. ಪತ್ರಿಕೆಗಳಲ್ಲಿ ಈ ರೀತಿ ಪ್ರಚಾರ ಮಾಡುವುದು ಸರಿಯಲ್ಲ. ಇವತ್ತಿನ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ಬಂದಿರುವ ಸಮಾಚಾರವನ್ನೂ ನೋಡಿದರೆ ಈ ವಿಚಾರವನ್ನು ಪ್ರಿವಿಲೇಜ್ ಕಮಿಟಿಗೆ ಸೇರಿಸಬೇಕಾಗಿದೆ ಅವರು ಏನು ಪತ್ರಿಕೆಯಲ್ಲಿ ಪ್ರಕಟಿಸಿದ್ದಾರೋ ಅದು ಸತ್ಯಕ್ಕೆ ದೂರವಾದುದು. ರೂಲ್ಸಿಗೆ ವಿರುದ್ಧವಾಗಿ 73-74ರಲ್ಲಿ ಆ ಕಾಲೇಜಿನಲ್ಲಿ ಅಡ್ಮಿಷನ್ ಮಾಡಿದ್ದರು. ಆ ವಿಚಾರ ಸರ್ಕಾರದ ಗಮನಕ್ಕೆ ಬಂದ ಮೇಲೆ ಅದನ್ನು ಸರ್ಕಾರ ತಡೆ ಹಿಡಿದ ಮೇಲೆ ಅಲ್ಲಿ ಯಾರನ್ನೋ ಒಬ್ಬರನ್ನು ಸೇರಿಸಿಕೊಂಡ ವಿಚಾರ ನಮ್ಮ ಸರ್ಕಾರದ ತಿಳುವಳಿಕೆಗೆ ಬರದ ಹಾಗೆ ಮಾಡಿದ್ದಾರೆ. ಇವೆಲ್ಲವೂ ಬಯಲಿಗೆ ಬರಬೇಕಾದರೆ ಈ ವಿಚಾರವನ್ನು ಪೂರ್ಣಯಾಗಿ ಪ್ರಿವಿಲೇಜ್ ಕಮಿಟಿಗೆ ರೆಫರ್ ಮಾಡಬೇಕಾಗುತ್ತದೆ. ಇದಕ್ಕೆ ಯಾರೂ ತಲೆ ತಗ್ಗಿಸಬೇಕಾಗಿಲ್ಲ. ಮೊದಲು. ಅಲ್ಲಿನವರು ಯೂನಿವರ್ಸಿಟಿ ನಮಗೆ ಬೇಕೆಂದು ಕೇಳಿದರು. ಆ ಮೇಲೆ ಯೂನಿವರ್ಸಿಟಿಯ ಸ್ಟೇಟಸ್ ಬೇಕೆಂದು ಕೇಳಿದರು, ಈ ವಿಚಾರ ಇಂಡಿಯನ್ ಮೆಡಿಕಲ್ ಕೌನ್ಸಿಲ್‌ನಲ್ಲಿ ಎಲ್ಲರಿಗೂ ಗೊತ್ತಿದೆ. ಇದರ ಬಗ್ಗೆ ಏನೋ ಒಂದು ರೀತಿಯಲ್ಲಿ ದಬಾವಣೆ ಮಾಡಿಕೊಂಡು ಹೋಗಬೇಕೆಂದು ಇದ್ದಾರೆ. ಪ್ರಿವಿಲೇಜ್ ಕಮಿಟಿ ರಿಪೋರ್ಟ್ ಈ ಸಭೆಯಲ್ಲಿ ಚರ್ಚೆಗೆ ಬಂದರೆ ಆಗ ಎಲ್ಲ ವಿಚಾರಗಳು ಬೆಳಕಿಗೆ ಬರುತ್ತದೆ.

3-30 P.M.

†ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ).—ಇದೇ ವಿಷಯದಲ್ಲಿ ಸಂಬಂಧಪಟ್ಟ ಹಾಗೆ ನಾನು ಒಂದು ಪ್ರಿವಿಲೇಜ್ ಮೋಷನ್ ತರುತ್ತಿದ್ದೇನೆ. ಈ ವಿಷಯಕ್ಕೆ ಸಂಬಂಧಪಟ್ಟ ರೂಲ್ಸನ ಈಗ ನಾನು ತಮ್ಮ ಗಮನಕ್ಕೆ ತರುವುದಿಲ್ಲ. ಅದು ತಮಗೇ ಗೊತ್ತಿದೆ. ಅದರ ಪ್ರಕಾರ ಈಗ ತಾವು ಕನ್‌ಸೆಂಟ್ ಕೊಡಬೇಕಾಗಿದೆ. ಪ್ರಿವಿಲೇಜ್ ಮೋಷನಾಗಿ ಈ ವಿಚಾರವನ್ನು ಈ ಸಭೆಯಲ್ಲಿ ತರುವುದಕ್ಕೆ ಸೆಕ್ಷನ್ 179ರಲ್ಲಿ ಏನು ಹೇಳಿದೆಯೆಂದರೆ ಅದನ್ನು ಇಲ್ಲಿ ಓದುತ್ತೇನೆ. ಅದು ಈ ರೀತಿ ಇದೆ

The right to raise a question of privilege shall be governed by the following conditions, namely.-

(i) not more than one question shall be raised at the same sitting;

(ii) the question shall be restricted to a specific matter of recent occurrence;

(iii) the matter requires the intervention of the Assembly.

ಮಣಿಪಾಲ್ ಕಾಲೇಜಿಗೆ ಸಂಬಂಧಪಟ್ಟ ಹಾಗೆ ಅವರು ಇವತ್ತಿನ ದಿವಸ ಏನೋ ಒಂದು ರೀತಿಯಲ್ಲಿ ಆಡಳಿತವನ್ನು ನಡೆಸುತ್ತಿದ್ದಾರೆ. ಈಗ ಈ ಸರ್ಕಾರದ ಆಡಳಿತವನ್ನೂ ಅವರೇ ನಡೆಸ ಬೇಕೆಂದು ಯೋಚನೆ ಮಾಡಿದ್ದಾರೆ ಆದ್ದರಿಂದ ಈಗ ಮಂತ್ರಿಗಳು ಮತ್ತು ಶಾಸನಸಭಾ ಸದಸ್ಯರು ಯಾವ ರೀತಿಯಲ್ಲಿಯೂ ಕಾರ್ಯಕಲಾಪಗಳನ್ನು ನಡೆಸಕೂಡದು ಎಂಬುದಾಗಿ ಟೀಕೆ ಟೀಕೆ ಮಾಡಲು ಈ ರೀತಿ ಮಾಡುತ್ತಿದ್ದಾರೆಂದು ಕಾಣುತ್ತದೆ. ಇದು ಬಹಳ ಸ್ಪಷ್ಟವಾದ ವಿಚಾರ ವಾಗಿದೆ. ಎರಡನೆಯದಾಗಿ ಕಳೆದ ಹಲವಾರು ದಿವಸಗಳಿಂದ ಈ ಸದನದಲ್ಲಿ ಇದೇ ವಿಚಾರ ವನ್ನು ಚರ್ಚೆ ಮಾಡುತ್ತಿದ್ದೇವೆ. ಇಂತಹ ಅನೇಕ ವಿಚಾರಗಳು ಚರ್ಚೆಯಾಗಬೇಕಾದರೆ ಮೊಟ್ಟ ಮೊದಲನೆಯದಾಗಿ ಅಸೆಂಬ್ಲಿಗೆ ಬರಬೇಕಾಗಿದೆ. ಈಗ ನಾನು ಎಲ್ಲವನ್ನೂ ಓದುವುದಿಲ್ಲ. ಮಾನ್ಯ ಶ್ರೀ ದೇವೇಗೌಡರು ಆ ವಿಚಾರಗಳ ಬಗ್ಗೆ ವಿಶದವಾಗಿ ಈಗಾಗಲೇ ಮಾತನಾಡಿದ್ದಾರೆ. ಮಾನ್ಯ ಶ್ರೀ ಸಿದ್ಧವೀರಪ್ಪನವರು ಹೇಳಿದ ಹಾಗೆ 13ನೇ ತಾರೀಖಿನ ದಿವಸದ ಉದಯವಾಣಿ ಪತ್ರಿಕೆಯಲ್ಲಿ ಬಂದಿರುವುದನ್ನು ನೋಡಿದರೆ ಅವರು ಎಷ್ಟು ದೂರ ಹೋಗಿದ್ದಾರೆಂಬುದು ಗೊತ್ತಾಗುತ್ತದೆ. 13ನೇ ತಾರೀಖಿನ 'ಉದಯವಾಣಿ'' ಪತ್ರಿಕೆಯಲ್ಲಿ ಒಂದು ಕಡೆ ಒಂದು ವಿಷಯ ಬಂದಿದೆ. ಅದು ಈ ರೀತಿ ಇದೆ —

ದಾವಣಗೆರೆ ಕಾಲೇಜಿನ ಸಮೀಪ ಸಂಪರ್ಕವುಳ್ಳ ಒಬ್ಬರು ಬುದ್ಧಿವಂತ ಸಚಿವರಂತೂ ಎಲ್ಲಾ ಖಾಸಗೀ ಕಾಲೇಜುಗಳನ್ನೂ ರಾಷ್ಟ್ರೀಕರಿಸುವ ಹೊಸ ಹಂಚಿಕೆ ಹೂಡಿ ಅದಕ್ಕೆ ಆರೋಗ್ಯ ವಿಶ್ವವಿದ್ಯಾನಿಲಯವೆಂದು ನಾಮಕರಣ ಮಾಡಿ ತಮ್ಮ ಮಗುವನ್ನು ದಿಲ್ಲಿಗೆ ತೋರಿಸಲು ಕೊಂಡು ಹೋದರು. ಆರೋಗ್ಯ ವಿಶ್ವವಿದ್ಯಾನಿಲಯದ ಕುಲಪತಿ ತಾನೇ ಆಗಿ ಎಲ್ಲಾ ಕಾಲೇಜುಗಳ ಸೀಟು ಗಳ ಮೇಲೂ ಹತೋಟಿ ಸಿಕ್ಕರೆ ''ಏನಾಗುವುದೆಂಬ ರುಚಿ ವೆಚ್ಚ ಮೊದಲೇ ಮಾನ್ಯ ಸಚಿವರಿಗೆ ದೊರೆತಿತ್ತು''.

ನೀವು ಆ ರುಚಿ ಈಗ ಕಂಡು ಬಿಟ್ಟಿದ್ದೀರಿ. ಇವರ ರುಚಿ ಅವರಿಗೆ ಗೊತ್ತಾಗಿದೆ, ಆದರೆ ನಿಮ್ಮ ರುಚಿಯನ್ನು ಆದರ ಬಗ್ಗೆ ಹೆಚ್ಚಿಸ ಕೂಡದು. ಪ್ರಜಾಪ್ರಭುತ್ವದಲ್ಲಿ ಮಂತ್ರಿಗಳು ಈ ರೀತಿ ಮಾಡಿ ದರೆ ಕೆಲಸಮಾಡುವುದಕ್ಕಾಗುವುದಿಲ್ಲ.

ಇನ್ನೊಂದು ಕಡೆ ಒಂದು ಮಾತನ್ನು ಹೇಳಿದ್ದಾರೆ, ಅದು ಈ ರೀತಿ ಇದೆ.—

''ಆರೋಗ್ಯ ಸಚಿವರಂತೂ ತಮ್ಮ ವೈಯುಕ್ತಿಕ ಬಲಪ್ರದರ್ಶನಕ್ಕೆ ಈ ಕಾಲೇಜುಗಳೇ ತಕ್ಕ ರಂಗಸ್ಥಳವೆಂದು ಅಧಿಕಾರ ರೂಢರಾದ ತಕ್ಷಣ 'ಮಸೆಮಸೆ' ಕೊಡಲಿ ಮಸೆ ಎಂದು ಹತೋಟಿ ಹತ್ಯಾರುಗಳನ್ನು ಸಿದ್ಧಗೊಳಿಸುವ ಹವ್ಯಾಸಕ್ಕೆ ತೊಡಗಿದರು.''

ಮಾನ್ಯ ಶ್ರೀ ಪುಟ್ಟಸ್ವಾಮಿಯವರು ಹಿಂದೆ ಮಂತ್ರಿಗಳಾಗಿದ್ದಾಗ ಈ ವಿಚಾರದ ಬಗ್ಗೆ ಬಹಳ ಸಹಾನುಭೂತಿ ತೋರಿಸಿದ್ದಾರೆ. ಈಗ ಮಾನ್ಯ ಶ್ರೀ ಚನ್ನಬಸಪ್ಪನವರೂ ಸಹ ಅದರ ಬಗ್ಗೆ ಸಹಾನುಭೂತಿ ತೋರಿಸುತ್ತಿದ್ದಾರೆಂದು ಹೇಳಿದ್ದಾರೆ. ಮಾನ್ಯ ಶ್ರೀ ಪುಟ್ಟಸ್ವಾಮಿಯವರ ಬಗ್ಗೆ ಪ್ರಿವಿಲೇಜ್ ಮೋಷನ್ ಆಗುತ್ತದೆಂದು ಕಾಣುತ್ತದೆ. ಮಾನ್ಯ ಶ್ರೀ ಸಿದ್ಧವೀರಪ್ಪನವರ ಬಗ್ಗೆ ಪ್ರಿವಿಲೇಜ್ ಮೋಷನ್ ಹೇಗಾಗುತ್ತದೋ ಗೊತ್ತಿಲ್ಲ.

ಇನ್ನು ಮೂರನೆಯದು, ಮತ್ತೊಂದು ಕಡೆ ಇನ್ನೊಂದು ಮಾತನ್ನು ಹೇಳಿದ್ದಾರೆ. ಅದು ಈ ರೀತಿ ಇದೆ.—

'' ಈ ಬಗೆಯ 'ವಿಧ್ವಂಸಕ' ಕೃತ್ಯಕ್ಕೆ ಬದಲಾಗಿ ಇವುಗಳ ಸ್ಥಿತಿಗಳನ್ನು ಸಹಾನುಭೂತಿಯಿಂದ ಅರಿತು, ಇವು ಕಾರ್ಯನಿರ್ವಹಣೆ ಮಾಡುವ ರೀತಿಯನ್ನು ಹಸನು ಮಾಡಲು ವಿಶ್ವಾಸದಿಂದ ದುಡಿದ ಆರೋಗ್ಯ ಸಚಿವರು ಒಬ್ಬಬ್ಬರಿದ್ದಾರೆ. ಮಾನ್ಯ ಪುಟ್ಟಸ್ವಾಮಿಯವರು ಮತ್ತು ಸದ್ಯ ಸಚಿವರಾಗಿರುವ ಮಾನ್ಯ ಚನ್ನಬಸಪ್ಪನವರು.''

ಇನ್ನು ನಾಲ್ಕನೆಯದು, ಮತ್ತೊಂದು ಕಡೆ ಇನ್ನೊಂದು ಮಾತನ್ನು ಹೇಳಿ ದ್ದಾರೆ. ಅದು ಈ ರೀತಿ ಇದೆ.

ಈ ದೆಸೆಯಿಂದ ಮಾತ್ರವೇ ಮೆಡಿಕಲ್ ಕಾಲೇಜ್ ಪ್ರವೇಶ ಕಾದ ಬಾಣಲೆಗೆ ಬಿದ್ದಂತಾಯಿತು. ಎಲ್ಲಾ ಕಡೆಗೂ ಅನ್ಯಾಯ ನಡೆಯುತ್ತಿದೆ. ಆದ್ದರಿಂದ ಇವುಗಳನ್ನು ಪೂರ್ತಿ ರಾಷ್ಟ್ರೀಕರಿಸಿ ಎಂಬ ಕೂಗು ಎದ್ದಿದೆ. ಕಾಲೇಜುಗಳಿಗೆ ಪ್ರವೇಶ ದೊರಕಿಸಲು ವಿದ್ಯಾರ್ಥಿಗಳು ಹಾತೊರೆಯುವ ಮುಹೂರ್ತದಲ್ಲಿಯೇ ವಿಧಾನಸಭಾ ಸದಸ್ಯರು ಗರ್ಜಿಸುವುದು ಬೆದರಿಕೆ ಹಾಕುವುದು, ಒಂದು ರಿವಾಜ್ ಆಗಿಬಿಟ್ಟಿದೆ. ಅದಕ್ಕೆ ಮಣಿದ ಆರೋಗ್ಯ ಸಚಿವರು ಈ ಸಾರಿ ಒಂದು ಸಂದರ್ಶಕ ಸಮಿತಿಯನ್ನು ನೇಮಿಸಲು ಒಪ್ಪಿದ್ದಾರೆ.

ಇದು ಬಹಳ ಪರಮಾವಧಿ ಯಾವ ಶಾಸನಸಭಾ ಸದಸ್ಯರೂ ಇಂಥಾದ್ದನ್ನು ನುಂಗಿಕೊಂಡು ಇರುವ ಹಾಗೆ ಇಲ್ಲ. ಆ ಜನರಿಗೆ ಸರಿಯಾಗಿ ಮರ್ಯಾದೆ ಮಾಡಬೇಕಾಗಿದೆ.

ಇನ್ನೂ ಐದನೆಯದು, ಮತ್ತೊಂದು ಕಡೆ ಇನ್ನೊಂದು ಮಾತನ್ನು ಹೇಳಿದ್ದಾರೆ. ಅದು ಈ ರೀತಿ ಇದೆ.—

ವಿದೇಶಗಳಿಂದಲೂ ಅಭ್ಯರ್ಥಿಗಳು ಕಾಲೇಜಿಗೆ ಬರುತ್ತಿದ್ದರು ಎಂದು ಇತಿಹಾಸದಲ್ಲೇ ಓದುವಾಗ ನಮಗೆ ರೋಮಾಂಚನವಾಗುತ್ತದೆ, ಈಗ ನಮ್ಮನ್ನು ಅರಸಿಕೊಂಡು ಬರುವ ವಿದೇಶೀ ಮೆಡಿಕಲ್ ವಿದ್ಯಾರ್ಥಿಗಳ ದೆಸೆಯಿಂದಲೂ ನಮಗೆ ಕೀರ್ತಿ ಉಂಟೆಂಬ ಅಂಶ ಹೇಗೆ ಮರವೇಯಾಗುತ್ತದೋ! ನಮ್ಮ ಮಕ್ಕಳು ವಿದೇಶಿ ವಿಶ್ವವಿದ್ಯಾನಿಲಯಗಳಿಗೆ ಹೋಗಿ ಓದಿದರೆ ನಮಗೆ ಹೆಮ್ಮೆ ಎನಿಸುತ್ತದೆ, ಅಲ್ಲಿನ ಜನರೂ ನಮಗೆ ವಿದೇಶಿಯರು ಬೇಡವೆಂದು ತಳ್ಳಿದರೆ ಆರೋಗ್ಯ ಸಚಿವರ ಮಕ್ಕಳೂ ದೊಡ್ಡ ಕುಳಿಯಿಂದಿರೂ ಡಾಕ್ಟರಾಗಲು ಸಾಧ್ಯವಿರುತ್ತಿತ್ತೆ?

ಇದು ಯಾವ ಸಚಿವರಿಗೆ ಸಂಬಂಧಪಟ್ಟಿದ್ದೋ ಗೊತ್ತಿಲ್ಲ. ಮಾನ್ಯ ಶ್ರೀ ಸಿದ್ಧವೀರಪ್ಪನವರಿಗೆ ಅನ್ವಯಿಸಬಹುದು. ಈಗಿನ ಆರೋಗ್ಯ ಸಚಿವರಿಗಲ್ಲವೆಂದು ಕಾಣುತ್ತದೆ.

ಶ್ರೀ ಎಚ್ ಡಿ. ದೇವೇಗೌಡ.—ಅವರಿಗೆ ಅಳಿಯನಿಲ್ಲ.

ಶ್ರೀ ಕೋಣಂದೂರು ಲಿಂಗಪ್ಪ.—ಅವರಿಗೆ ಮಕ್ಕಳು ಇದ್ದಾರೆ.

†ಶ್ರೀ ಎಂ ಎಸ್. ಕೃಷ್ಣನ್.—ಇನ್ನು ಆರನೆಯದು, ಮತ್ತೊಂದು ಕಡೆ ಇನ್ನೊಂದು ಮಾತನ್ನು ಹೇಳಿದ್ದಾರೆ. ಅದು ಈ ರೀತಿ ಇದೆ.

ಬೆರಳು ನುಂಗಲು ಬಿಟ್ಟರೆ ಕೈಯನ್ನೇ ನುಂಗಿದ ಗಾದೆಯಂತೆ ಶೇಕಡ ಅಷ್ಟು ಇಷ್ಟು ಎಂದು ವರ್ಷ ವರ್ಷ ಮೆಡಿಕಲ್ ಕಾಲೇಜಿನ ಸೀಟನ್ನು ಕಾಲೇಜಿನ ಕೈಯಿಂದ ಸ್ವಾಧೀನ ಪಡಿಸಿ ಮನಬಂದಂತೆ ವಿತರಣೆ ಮಾಡುವ ಅಧಿಕಾರವಂತರಿಗೆ ಸ್ವತಂತ್ರ ಸಂಸ್ಥೆಗಳು ಇರಲೇ ಕೂಡದೆಂಬ ಛಲವಾದಿಗಳಿಗೆ ಸಾಹಸಿ ಪ್ರಿಯರ ಈ ಜಿಲ್ಲೆ ಸಮರ್ಪಕವಾದ ಉತ್ತರ ನೀಡುತ್ತದೆ.

ಇವತ್ತು ಈ ವಿಚಾರದಲ್ಲಿ ಎದ್ದುನಿಂತು ಮಣಿಪಾಲ್ ಜನರಿಗೆ ಬೆಂಬಲ ನೀಡಿದಂತಹವರ ಬಗ್ಗೆ ಶಾಸನಸಭಾ ಸದಸ್ಯರೂ ಹಾಗೂ ಮಂತ್ರಿಗಳೂ ಹತೋಟಿಯಲ್ಲಿಡಬೇಕೆಂದೂ ಅದರ ಒಂದು ಜವಾಬ್ದಾರಿಯನ್ನು ಸರ್ಕಾರ ವಹಿಸಿಕೊಳ್ಳಬೇಕೆಂದು ನಾನು ಹೇಳುತ್ತೇನೆ ಅವರು ಇವತ್ತು ಸವಾಲು ಹಾಕಿದ್ದಾರೆ. ಆ ಸವಾಲನ್ನು ಎದುರಿಸುವ ಧೈರ್ಯ ಶಕ್ತಿ ಎಲ್ಲ ಮಂತ್ರಿಗಳಿಗೂ ಬಹುಮುಖ್ಯವಾಗಿ ಮುಖ್ಯ ಮಂತ್ರಿಗಳಿಗೂ, ಹಾಗೂ ನಮ್ಮೆಲ್ಲರಿಗೂ ಇರಬೇಕಾಗುತ್ತವೆ ಕೆಲವು ಮಂತ್ರಿಗಳಿಗೆ ಆ ರೀತಿ ಇರಬಹುದು, ಆದರೆ ಮಾನ್ಯ ಶ್ರೀ ಚನ್ನಬಸಪ್ಪನವರಿಗೆ ಆ ರೀತಿ ಇದೆಯೋ ಇಲ್ಲವೋ ಗೊತ್ತಿಲ್ಲ. ಇದು ಬಂದ ಮೇಲೆ ಅವರು ಇಲ್ಲಿ ಕಾಣುವುದಿಲ್ಲ. ಅವರಿಗೆ ಆ ರೀತಿ ಇರಲಾರದೆಂದು ಕಾಣುತ್ತದೆ. ಮೊನ್ನೆ ದಿವಸ ಮಣಿಪಾಲ್ ಕಾಲೇಜು ವಿಷಯ ಇಲ್ಲಿ ಚರ್ಚೆಗೆ ಬಂದಾಗ ಅಲ್ಲಿ ಒಂದು ಕಾಲೇಜು ಇರಬೇಕೋ ಅಥವಾ 2 ಕಾಲೇಜು ಇರಬೇಕೋ ಎಂಬ ಬಗ್ಗೆ ಬಹಳ ಪ್ರಯತ್ನ ಮಾಡಿದರು ಈ ಸಭೆ ಅದಕ್ಕೆ ಒಪ್ಪಿಗೆ ಕೊಡಲಿಲ್ಲ. ಏನೋ ಒಂದು ರೀತಿಯಲ್ಲಿ ವಿಚಾರವಾಗಿ ಒಂದು ತೀರ್ಮಾನಕ್ಕೆ ಬರುವ ಹಾಗೆ ಆಯಿತು. ಈ ಮಣಿಪಾಲ್ ಕಾಲೇಜನ್ನು ಸರ್ಕಾರದ ಹತೋಟಿಗೆ ತೆಗೆದುಕೊಳ್ಳಬೇಕೋ. ಅಥವಾ ರಾಷ್ಟ್ರೀಕರಣ ಮಾಡಬೇಕೋ ಅಥವಾ ಮೆಡಿಕಲ್ ಎಜುಕೇಷನ್ನನ್ನೇ ರಾಷ್ಟ್ರೀಕರಣ ಮಾಡಬೇಕೋ ಎಂಬ ಬಗ್ಗೆ ಮಾನ್ಯ ಸಚಿವರು ಬಹಳ ಪ್ರಯತ್ನ ಮಾಡುತ್ತಿದ್ದಾರೆ. ಇವತ್ತೋ ಅಥವಾ ನಾಳೆಯೋ ಈ ವಿಚಾರದ ಬಗ್ಗೆ

ಮಾಣಿಪಾಲಿನ ಜನರಿಗೆ ಆ ಒಂದು ಅನುಕೂಲ ಮಾಡಿಕೊಡುವ ಪ್ರವೃತ್ತಿ ಮಾನ್ಯ ಶ್ರೀ ಚನ್ನ ಬಸಪ್ಪನವರಿಗೆ ಇದೆಯೆಂದು ನನಗನ್ನಿಸುತ್ತದೆ. ಏಕೆಂದರೆ ಅಲ್ಲಿನವರೆಲ್ಲರೂ ಅವರಿಗೆ ಶಾಭಾಸ್ ಗಿರಿ ಕೊಟ್ಟಿದ್ದಾರೆ. ಆದ್ದರಿಂದ ಇಂತಹ ಪತ್ರಿಕಾ ಹೇಳಿಕೆಯಿಂದ ನಮ್ಮ ಹಕ್ಕುಗಳಿಗೆ ಮೂಲಭೂತವಾಗಿ ಚ್ಯುತಿ ಬರುವ ಹಾಗೆ ಮಾಡಿದ್ದಾರೆ. ಇವರಿಂದ ಶಾಸನಸಭಾ ಸದಸ್ಯರಾದರೂ ಗೌರವದಿಂದ ಈ ಸಭೆಯಲ್ಲಿ ಕುಳಿತುಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ಇದರ ಬಗ್ಗೆ ಲೇಟೆಸ್ಟ್ ಇಷ್ಯೂಸ್ ಏನೇನು ಇವೆಯೋ ಅವನ್ನು ಇಲ್ಲಿ ಚರ್ಚೆ ಮಾಡಬೇಕಾಗಿದೆ. ಹಿಂದೆ ಪ್ರಿವಿಲೇಜ್ ಕಮಿಟಿ ಮೀಟಿಂಗ್ ಏಪ್ರಿಲ್ 1977ರಲ್ಲಿ ನಡೆದಿದೆ. ಆಗಲೂ ಉದಯವಾಣಿ, ಪ್ರಜಾವಾಣಿ, ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳಲ್ಲಿಯೂ ಈ ವಿಚಾರಬಂದಿದೆ.

In this connection, I would like to quote from the 'PRIVILEGES DIGEST' of April 1977, issued from the Lok Sabha Secretariat.

"Point of Privilege—Bihar Legislative Council (1974)

Casting reflections on the House and members by a newspaper.

Facts of the case and reference to Committee of Privileges.

On the 23rd May, 1974, Shri Ram Bilas Sharma, a member, gave notice of a question of privilege against Shri Ram Narayan Yadav, General Secretary, Bihar Bhrashtachar Nirodh Abhiyan Sangh, Patna, the Manager Karmayogi Press, Machuatoli, Patna, for publishing an editorial in his newspaper BHRASHTACHAR NIRODH, dated the 30th April, 1974 under the caption 'VIDHAN SABHA OUR VIDHAN PARISHAD PER CHAR SAU BEES KAKASE KENDRA KARE". The impugned editorial read *inter alia* as follows :—

"And the poor will get property and the landless will get their land. But, is it how during the past 27 years, the Ministers, Legislators and members of Legislative Council have consumed crores of rupees in the form of salaries and allowances in the name of welfare of the people ? In the same manner, by passing legislations and giving relaxations, this capitalist Government has been providing opportunities to the capitalists and other persons having black money to get all the benefits by transferring and selling their property and immovable assets in fake names...Such representatives of the people should be shot down. But the question is who should do it."

The member alleged in his notice that aspersions had been cast on the legislative character of the members of the Legislative Council collectively by publishing the aforesaid news item and that besides causing a breach of privilege of the members, contempt of the House had also been committed.........

The Chairman referred the matter to the Committee of Privileges on the 25th May, 1974, for examination and report under Rule 246 of the Rules of Procedure and Conduct of Business in the Council."

Here also, he has challenged all the Ministers and Members of the Legislature. It is a very serious matter. I request the Chair to give consent for this matter to be raised and to refer it to a Committee of Privileges.

† ಶ್ರೀ ಕೋಣಂದೂರು ಲಿಂಗಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ಕೃಷ್ಣನ್‌ರವರ ವಾದವನ್ನು ಪುಷ್ಟೀಕರಿಸುತ್ತಾ ಎರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದು ಈ ಮನೆಯ ಸದಸ್ಯರ ಹಕ್ಕಿಗೆ ನೇರವಾಗಿ ಚ್ಯುತಿ ತರುವಂತಹ ವಿಷಯವಾಗಿದೆ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ನ್ಯಾಯವಂತರು, ರಾಜಕೀಯದಲ್ಲೂ ನ್ಯಾಯವಂತರು ಆದರೆ ಇವರು ಇಷ್ಟು ಬುದ್ಧಿಶಕ್ತಿ ಇದ್ದೂ, ಧುರೀಣತ್ವವನ್ನು ಸ್ವಲ್ಪಬುದ್ಧಿಯವರಿಗೆ ಬಿಟ್ಟುಕೊಡಬಾರದು." ನಾವು ಮೊದಲು ರಕ್ಷಿಸಬೇಕಾದ್ದು ನಮ್ಮ ಮನೆಯನ್ನು, ಎರಡನೇಯದು ಮಠವನ್ನು ಎಂದು ದಕ್ಷಿಣ ಕನ್ನಡ ಜಿಲ್ಲೆಯ ಜನತೆಗೆ ಮತ್ತು ಜಿಲ್ಲೆಯ ಶಾಸಕರಿಗೂ ಒಂದು ಸವಾಲು ಮಾಡುವಂತೆ ಇವರು ಪ್ರೇರೇಪಿಸಿದ್ದಾರೆ.

† ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಅಧ್ಯಕ್ಷರೇ, ಈಗ ಈ ವಿಷಯದ ವಿವರಣೆಯನ್ನು ಮಾನ್ಯ ಕೃಷ್ಣನ್‌ರವರು ಮತ್ತು ದೇವೇಗೌಡರು ಹೇಳಿದ್ದಾರೆ. ಇದು ಹಕ್ಕುಭಾಧ್ಯತೆಗೆ ಚ್ಯುತಿ ಬರುವಂಥಾದ್ದು ಎಂದು ಹೇಳಿದ್ದಾರೆ. ಪ್ರಜಾವಾಣಿಯಲ್ಲಿ ಮತ್ತು ಡೆಕ್ಕನ್ ಹೆರಾಲ್ಡ್ ಪತ್ರಿಕೆಯಲ್ಲಿ ಬಂದಿರುವುದನ್ನು ನೋಡಿದರೆ ಇದರಲ್ಲಿ ದೇವೇಗೌಡರು, ಮಾನ್ಯ ಸಿದ್ದವೀರಪ್ಪನವರು ಹಾಗೂ ಯಶಪಾಲ್ ಕಪೂರ್‌ರವರು ಮತ್ತು ಇಂದಿರಾಗಾಂಧಿಯವರನ್ನು ವಿರೋಧಿಸಿ ಮಾತನಾಡುವಾಗ ಈ ನಾಯಕರ ಹೆಸರನ್ನು ಪ್ರಸ್ತಾಪ ಮಾಡುವಂತಹ ಯೋಗ್ಯತೆ ಮಾನ್ಯ ಪೈ ರವರಿಗೆ ಮತ್ತು ಅವರ ಕಂಪನಿಯವರಿಗೆ ಹಿಂದೆ ಏನು ತುರ್ತುಪರಿಸ್ಥಿತಿ ಇತ್ತೋ ಆಗ ಮತ್ತು ಹಿಂದೆ ಲೋಕಸಭೆಗೆ ಚುನಾವಣೆ ನಡೆಯುವುದಕ್ಕೆ ಮೊದಲು ಬಾಯಿ ಇರಲಿಲ್ಲ. ಇವತ್ತಿನ ಪತ್ರಿಕೆಯಲ್ಲಿ ಬಂದಿರುವುದನ್ನು ನೋಡಿದರೆ ಇದನ್ನು ಯಾರು ಪತ್ರಿಕೆಗೆ ಕೊಟ್ಟರೋ ಅಥವಾ ಪತ್ರಿಕಾ ವರದಿಗಾರರೇ ಸುದ್ದಿ ಸಂಗ್ರಹಣೆ ಮಾಡಿ ಇದನ್ನು ಪತ್ರಿಕೆಯಲ್ಲಿ ಹಾಕಿದ್ದಾರೋ ಗೊತ್ತಿಲ್ಲ.

ಶ್ರೀ ಡಿ. ದೇವರಾಜ ಅರಸ್.—ಇದು ಯಾವುದು ಏನು ವುದು ಗೊತ್ತಿಲ್ಲ. ನಾನು ಡೆಕ್ಕನ್ ಹೆರಾಲ್ಡ್ ಪತ್ರಿಕೆ ಓದಿದ್ದೇನೆ. ಆದರಲ್ಲಿ ಸ್ಟ್ಯಾಫ ರಿಪೋರ್ಟರ್ ಎಂದು ಇದೆ. ಪ್ರಜಾವಾಣಿಯನ್ನು ಓದಿಲ್ಲ ಅದರಲ್ಲಿ ಏನು ಬಂದಿದೆ ಎಂದು ನಾನು ನೋಡಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಅಧ್ಯಕ್ಷರೇ, ಈ ವಿಚಾರ ಮಾನ್ಯ ಸಿದ್ಧಾರ್ಥ ಎನ್ನುವವರ ಲೇಖಣಿಯಲ್ಲಿ ಬಂದಿದೆ. ಅದನ್ನು ಎಲ್ಲರೂ ಓದಿದ್ದಾರೆ, ಆದುದರಿಂದ ನಮಗೆ ಈ ಸಮಸ್ಯೆ ಬಂದಿದೆ ಈಗ ಇಲ್ಲಿ ನಾವು ಏನು ಚರ್ಚೆಮಾಡಿದ್ದೇವೆ, ಇದರ ಬಗ್ಗೆ ಸಚಿವರ ಉತ್ತರವೂ ಬಂದಿದೆ. ಇದು ಏತಕ್ಕೆ ಉದ್ಭವವಾಯಿತು ಎಂದರೆ ಅವರು ಒಂದು ವಾರದಿಂದ ಲಾಬಿ ಮಾಡುತ್ತಿದ್ದಾರೆ. ಅವರು ಎಲ್ಲಿಯವರೆಗೆ ಹೋಗುವುದಕ್ಕೆ ಹೊರಟಿದ್ದಾರೆಂದರೆ ಶಾಸನ ಸಭಾಸದಸ್ಯರು, ಮತ್ತು ಮಂತ್ರಿಗಳು ಹಾಗೂ ಮಾನ್ಯ ಸಿದ್ದವೀರಪ್ಪನವರು ಇವರ ಬಗ್ಗೆ ಕಾಲೇಜಿನಲ್ಲಿ ನಡೆದಂತಹ ವ್ಯವಹಾರವನ್ನೆಲ್ಲಾ ಹೇಳಿ ಇದರ ಬಗ್ಗೆ ಒಂದು ಸವಾಲು ಹಾಕಿ ಎದುರಿಸುವುದಕ್ಕೆ ಹೊರಟಿದ್ದಾರೆ. ನಾನು ಅದಕ್ಕೆ ಅವರಿಗೆ ಈ ಸಭೆಯಲ್ಲೂ ಸವಾಲು ಹಾಕುವುದಕ್ಕೆ ಸಿದ್ಧನಿದ್ದೇನೆ. ಜೊತೆಗೆ ಅಲ್ಲಿಗೇ ಹೋಗಿ ಅವರ ಮುಖಕ್ಕೆ ಅವರ ಊರಿನಲ್ಲಿ ಬೇಕಾದರೆ ಹೇಳುವುದಕ್ಕೂ ತಯಾರಿದ್ದೇನೆ. ಅವರು ದಕ್ಷಿಣ ಕನ್ನಡ ಜಿಲ್ಲೆಯ ಜನರನ್ನು ಎತ್ತಿಕಟ್ಟುವುದಕ್ಕೆ ಹೊರಟಿದ್ದಾರೆ. ಅಲ್ಲಿ ಯಾರು ಬರುವುದಕ್ಕೆ ತಯಾರಿಲ್ಲ. ನಮ್ಮ ಶಾಸನ ಸಭಾ ಸ್ನೇಹಿತರನ್ನು ಎತ್ತಿಕಟ್ಟುವುದಕ್ಕೆ ಹೋಗಿದ್ದರು ಅವರು ತಿರುಗಿಬಿದ್ದಿದ್ದಾರೆ. ಈ ಮಟ್ಟದಲ್ಲಿ ನಡೆದರೆ ನಾವು ಶಾಸನ ಸಭಾ ಸದಸ್ಯರು, ಮಂತ್ರಿಗಳು ನಿರ್ಭೀತರಾಗಿ ಕೆಲಸ ಮಾಡುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಈ ವಿಷಯವನ್ನು ಪ್ರಿವಿಲೇಜ •

ಸಮಿತಿಗೆ ಕಳುಹಿಸುವುದರ ಜೊತೆಗೆ ಅವರನ್ನು ಈ ಶಾಸನ ಸಭೆಗೆ ಕರೆಸುವುದಕ್ಕೂ ಅನುಮತಿ ಕೊಡಬೇಕೆಂದು ಹೇಳುತ್ತೇನೆ. ಈ ವಿಚಾರದಲ್ಲಿ ಇಷ್ಟು ನಾಲಗೆಯನ್ನು ಉದ್ದವಾಗುವುದಕ್ಕೆ ಶ್ರೀಮಾನ್ ಚೆನ್ನಬಸಪ್ಪನವರು ಕಾರಣರಾಗಿದ್ದಾರೆಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ.........

ಶ್ರೀ ಡಿ. ದೇವರಾಜ ಅರಸ್.—ಯಾರೋ ಏನೋ ಹೇಳುತ್ತಾರೆ. ಇನ್ನೊಬ್ಬರು ಇನ್ನೊಂದು ಹೇಳುವುದಕ್ಕೆ ಹೋಗುತ್ತಾರೆ. ಅದಕ್ಕೆ ಮಾನ್ಯ ಚೆನ್ನಬಸಪ್ಪನವರನ್ನು ಗುರಿ ಮಾಡುವುದು ಸರಿಯಲ್ಲ.........

ಶ್ರೀ ಕಾಗೋಡು ತಿಮ್ಮಪ್ಪ.—ಇವತ್ತು ಅವರು ಮಂತ್ರಿಗಳ ಹಾಗೂ ಶಾಸಕರ ಮೇಲೆ ಬೀಳುವುದಕ್ಕೆ ಹೊರಟಿದ್ದಾರೆ.

SRI D. DEVARAJ URS. Your allegation is thoroughly incorrect. That was as per the recommendation. How can you attribute motives to the Minister. That was a recommendation of the University Committee headed by another Vice-Chancellor. ನೀವು ಈ ರೀತಿಯಾಗಿ ಹೇಳುವುದಾದರೆ ಯಾರೂ ಕೆಲಸ ಮಾಡುವುದಕ್ಕಾಗುವುದಿಲ್ಲ.

SRI M. S. KRISHNAN.—The way in which he defended the other day the particular recommendation.

SRI D. DEVARAJ URS.—The order has been made after taking a final decision in the matter. It should end there. When you want to attack without a proper basis, similarly there will be another attack. It is better to avoid attacks. This is my appeal to you. Otherwise the debate will not go on in a proper way.

ಶ್ರೀ ಎಚ್. ಡಿ, ದೇವೇಗೌಡ.—ಈ ಮೂರು ಲೇಖನಗಳನ್ನು ತಾವು ಓದಿದ್ದೀರಿ. 3 ಲೇಖನಗಳನ್ನು ಓದಿದಾಗ ಈ ಸದನದಲ್ಲಿ ಮಾನ್ಯ ಚೆನ್ನಬಸಪ್ಪನವರನ್ನು ಒಬ್ಬರನ್ನು ಬಿಟ್ಟರೆ ಬಾಕಿಯುವರೆಲ್ಲರ ಮೇಲೆ ಎಷ್ಟು ತೇಜೋವಧೆ ಮಾಡಲಿಕ್ಕೆ ಸಾಧ್ಯವೋ ಅಷ್ಟು ಮಾಡಿದ್ದಾರೆ. ಅನುಮತಿ ಇಲ್ಲದೆ ಇಲ್ಲಿ ಚರ್ಚೆಗೆ ನಾನು ಹೋಗಬಾರದು. ದಯಮಾಡಿ ತಾವು ಸಹ ಇದನ್ನು ಪರಿಶೀಲನೆ ಮಾಡಿ. ಮಾನ್ಯ ಚೆನ್ನಬಸಪ್ಪನವರು ಒಬ್ಬರೇ ಪ್ರಾಮಾಣಿಕ ವ್ಯಕ್ತಿಗಳು ಎಂದು ಹೇಳಿದ್ದಾರೆ. ಅವರು ಪ್ರಾಮಾಣಿಕರು ಎಂದು ಬಿರುದಾವಳಿಯನ್ನು ಕೊಟ್ಟಿದ್ದಾರೆ. ಹಿಂದೆ ಪ್ರತ್ಯಕ್ಷವಾಗಿ ಬೆಂಬಲ ಅವರಿಗಿದೆಯೆಂದು ವ್ಯಕ್ತವಾಗುತ್ತದೆ. ಇಂಥ ಒಂದು ಅಭಿಪ್ರಾಯವನ್ನು ನಾವು ಕನ್‌ಕ್ಲೂಡ್ ಮಾಡುವುದಕ್ಕೆ ಯಾರೂ ಅಡ್ಡಿಪಡಿಸುವುದಕ್ಕಾಗುವುದಿಲ್ಲ, ತಾವು ಅನುಮತಿ ಕೊಟ್ಟ ಮೇಲೆ ನಾನು ಮಾತನಾಡುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಅಧ್ಯಕ್ಷರು ಇದಕ್ಕೆ ಅನುಮತಿಯನ್ನು ಕೊಡಬೇಕು. ಮಾನ್ಯ ಮುಖ್ಯಮಂತ್ರಿಗಳು ಇದನ್ನು ಗಂಭೀರವಾಗಿ ನೋಡಬೇಕು. ಏಕೆಂದರೆ ಅವರಲ್ಲಿ ಹಣ ಇದೆ, ಹಣ ಇದೆಯೆನ್ನುವ ಕಾರಣಕ್ಕಾಗಿ ಇದನ್ನು ಪ್ರತಿಪಾದನೆ ಮಾಡತಕ್ಕ ಕೆಲಸ ಸರಿಯಲ್ಲ. ಕ್ಯಾಪಿಟೇಷನ್ ಫೀಸ್ ಬಗ್ಗೆ ಹೇಳುವಾಗ ಬಡವರಿಗೆ ಒಂದು ಸೀಟು ಇರಬಹುದು, ಶ್ರೀಮಂತರಿಗೆ ಏನು ? ಅವರಿಗೆ ಇವತ್ತು ಹಣದ ಅಹಂಭಾವ ಎಷ್ಟಾಗಿದೆಯೆಂದು ಹೇಳಿದರೆ, ನಮಗೂ ಅದರಿಂದ ಮನಸ್ಸಿನ ಮೇಲೆ ಪರಿಣಾಮ ಉಂಟು ಮಾಡುತ್ತದೆ. ಆದ್ದರಿಂದ ದಯವಿಟ್ಟು ಇದರ ಬಗ್ಗೆ ಚರ್ಚೆಗೆ ಅವಕಾಶ ಕೊಡಿ, ಆಗ ನಾವು ದೀರ್ಘವಾಗಿ ಹೇಳುತ್ತೇನೆ. ಈ ಹಂತದಲ್ಲಿ ನಮ್ಮ ಹಕ್ಕು ಬಾಧ್ಯತೆಯ ಬಗ್ಗೆ ಚರ್ಚೆ ಮಾಡುವುದಕ್ಕೆ ತಾವು ಅನುಮತಿಯನ್ನು ಕೊಡಬೇಕು.

SRI D. DEVARAJ URS.—I would again say, the point at issue now is that the writings criticising the Ministers or the ex-Ministers or the Legislators in a particular paper in a series of articles, that is a subject-matter. That is to say whether this amounts to a

question of privilege or whether they were entitled in a way to attack the people. Regarding the college itself, that is not the subject-matter-whether Mangalore should have one college or two college or how many seats, that is again a separate issue. If we mix up the two issues, the whole thing becomes something like a Panduras Box, the debate gets expanded and we do not come to proper conclusion. The question now here is, they might have argued in favour of their having two colleges or three colleges.

ಅಧ್ಯಕ್ಷರು – ಈಗ ತಾವು ಬರೀ 'ಉದಯವಾಣಿ' ಪತ್ರಿಕೆಯನ್ನು ತೆಗೆದ ಕೊಂಡರೆ ಒಂದು ಅರ್ಥ ಬರುತ್ತದೆ. ಮಾನ್ಯ ಸಿದ್ದವೀರಪ್ಪನವರು ಹೇಳಿದ ರೀತಿಯಲ್ಲಿ ಪ್ರಜಾವಾಣಿಯನ್ನು ತೆಗೆದುಕೊಂಡರೆ.........

SRI D. DEVARAJ URS.—Now the subject before us is Prajavani and Deccan Herald. I cannot straightaway accept it because I have not looked into them. Here on the very face of it, the Udayavani and the resolution before us is with regard to Udayavani and the articles. We would like to confine ourselves to this. So far as the other two papers are concerned, I am not in a position to say whether it amounts to privilege or not. It is a very doubtful proposition because it does not refer to (I have not read completely Prajavani) what the debate took place here. The Deccan Herald does not refer to the debate that took place. Therefore anybody outside has a right to criticise the stand taken by the Government and also to say that Government may not be correct in saying that the nationalisation should take place; somebody might argue for nationalisation. But the question before us is whether the paper has a right to allow anybody to write criticising or casting aspersions against the members who are functioning in the Legislature. That is the point at issue. Therefore let us confine ourselves to that issue. If you want to take up the issue regarding whether it should be nationalised or not, whether so many seats should be given or not, that is a separate debate which we can take it up or which has already been debated and the Government policy is also made known. Instead of dragging on this debate like this, I would appeal to you, let us confine ourselves to the question of privilege, whether they had a right to write like this, whether they have cast aspersions. Under the circumstances what we should is a point for a decision by this House.

† ಶ್ರೀ ಬಿ. ವಿ. ಕಕ್ಕಿಲಾಯ (ಬಂಟವಾಳ).—ಈ ಲೇಖನದ ಹಿನ್ನೆಲೆ ಬಹಳ ಆಳವಾಗಿದೆ ಜುಲೈ ಐದನೆಯ ತಾರೀಖು ನಮಗೆ ಪೈ ಅವರಿಂದ ಒಂದು ಆಮಂತ್ರಣ ಬಂದಿದೆ. ಅದರಲ್ಲಿಯೂ ದಕ್ಷಿಣ ಕನ್ನಡ ಜಿಲ್ಲೆಯ ಶಾಸಕರಿಗೆ ಮಾತ್ರ.

"I propose to apprise all our friends and the Legislators from South Canara District re: Recent controversy of the

Kasturba Medical College, Manipal. Will you therefore kindly join me at dinner on Wednesday the 6th July 1977 at 9 p. m. at Woodlands, Bangalore.

T. Ramesh Pai, Registrar."

ಇದನ್ನು ಕಳುಹಿಸಿದ್ದಾರೆ. ಕೆಲವರು ಇದಕ್ಕೆ ಹೋಗಿರಬಹುದು. ನನ್ನಂಥವರು ಕೆಲವರು ಹೋಗಿಲ್ಲ. ಆದರೆ ವಿಚಾರ ಬೇರೆ ಟಿ. ರಮೇಶ್ ಪೈ, ರಿಜಿಸ್ಟ್ರಾರ್ ಆಫ್ ಅಕಡೆಮಿಕ್ ಕೌನ್ಸಿಲ್ ಅಂಡ್ ಜನರಲ್ ಎಜುಕೇಷನ್ ಮಣಿಪಾಲ್ ಇವರಿಂದ ಬರೆದಂಥ ಈ ಕಾಗದ ನಮ್ಮ ಪಿಜನ್ ಹೋಲ್‌ನಲ್ಲಿ ಸಿಕ್ಕಿತು. ಇವರು ಎಷ್ಟು ದೂರ ಹೋಗಿದ್ದಾರೆ ಎನ್ನುವುದನ್ನು ತಾವು ಸ್ವಲ್ಪ ವಿಚಾರ ಮಾಡಬೇಕು. ನಿರ್ದಾಕ್ಷಿಣ್ಯವಾಗಿ ನಾನು ಹೇಳಬೇಕಾದ್ದನ್ನು ಹೇಳಿದ್ದೇನೆ. ಇಲ್ಲಿ ಇದರ ಬಗ್ಗೆ ಚರ್ಚೆ ನೆಡೆದಮೇಲೆ ಇಲ್ಲಿಯ ಶಾಸಕರಿಗೆ ಊಟ ಕೊಟ್ಟು ಪ್ರಭಾವ ಬೀರಲಿಕ್ಕೆ ಆಗಲಿಲ್ಲ ಎಂದು ತಿಳಿದುಕೊಂಡು ಬಹಿರಂಗವಾಗಿ ಭಯೋತ್ಪಾದನೆ ಮಾಡುವುದಕ್ಕೆ ಹೊರಟಿದ್ದಾರೆ. ಆರನೆಯ ತಾರೀಖು ಊಟ, 12ನೇ ತಾರೀಖಿಗೆ ಪತ್ರಿಕೆಯಲ್ಲಿ ಇದು ಬಂದಿದೆ. ಇದು ಸುಲಭವಾದಂಥ ಪ್ರಶ್ನೆಯಲ್ಲ, ಬಹಳ ಗಂಭೀರವಾದಂಥ ಪ್ರಶ್ನೆ. ಇನ್ನೂ ಮುಂದೆ ಹೋಗಿ ಅವರು, ಬೆಳಗಾವಿ ಮೆಡಿಕಲ್ ಕಾಲೇಜನ್ನು ಶಿಕ್ಷಿಸುವುದಕ್ಕೆ ಹೊರಟ ಪ್ರಾಮಾಣಿಕ ಸಚಿವರಿಗೆ ರಾಜ್ಯದ ಒಡಕು ರಾಜಕೀಯ ವಿಧಾನಸಭೆಯಲ್ಲಿ ಇತ್ತೀಚೆಗೆ ತರಾಟೆಗೆ ತೆಗೆದುಕೊಂಡಿತು. ಈ ರೀತಿಯಾಗಿ ಇದರಲ್ಲಿ ಬರೆದರೆ ಇದನ್ನು ತಾವು ಬಹಳ ಗಂಭೀರವಾಗಿ ಪರಿಗಣಿಸಬೇಕು

† SRI H. SIDDAVEERAPPA (Minister for Law).—With due respect to the Chief Minister, Madam, I would like to say that what has appeared in today's paper will also form a part of the privilege motion for the reason the same subject-matter is covered throwing further mud into the people who administered the Department of Health and that is also a matter which can legitimately go into and form part of the privilege motion. If you want I can give a separate privilege motion, that may not be necessary. there may be no need, it forms part of the same transaction. As Mr. Kakkilaya said, it has been going on weaving story against those who have been opposing them. Therefore I request that what has appeared in today's paper in Prajavani and Deccan Herald may also be included.

SRI D. DEVARAJ URS.—I am afraid, I cannot accept that proposition. It should be separately thought of May be, it might have offended somebody. With reference to what has taken place in the House, there is privilege. otherwise there is no privilege. In many instances this very paper has criticised me. But I don't carry an ill-will against it because it criticised me. The point here is whether it is a privilege or not. What is taken place will always be a privilege but not otherwise.

4-00 P. M.

† ಶ್ರೀ ಎಚ್. ಎನ್. ನಂಜೇಗೌಡ.—ಮಾನ್ಯ ಅಧ್ಯಕ್ಷರೇ, ಪ್ರಜಾವಾಣಿ ಮತ್ತು ಡೆಕ್ಕನ್ ಹೆರಾಲ್ಡ್ ಪತ್ರಿಕೆಯಲ್ಲಿ ಈ ಬಗ್ಗೆ ಏನು ಬಂದಿದೆ ಅದರ ಒಟ್ಟು ಅಭಿಪ್ರಾಯವನ್ನು ತೆಗೆದುಕೊಂಡರೆ ಮಾನ್ಯ ಮುಖ್ಯಮಂತ್ರಿಗಳು ಹೇಳಿದ ಹಾಗೆ ಈವೊತ್ತಿನ ಪ್ರಜಾವಾಣಿಯಲ್ಲಿ ಇದಕ್ಕೆ ಸಂಬಂಧಪಟ್ಟ ಹಾಗೆ ಬಂದಿಲ್ಲ. ನಾನು ಏನು ನಿರೀಕ್ಷಣೆ ಮಾಡಿದ್ದೇ ಎಂದರೆ ಈವೊತ್ತಿನ ಕೊಶ್ಚನ್ ಅವರ್ ಮುಗಿದ ಮೇಲೆ ಮಾನ್ಯ ಆರೋಗ್ಯ ಮಂತ್ರಿಗಳೇ ಇದರ ಸತ್ಯಾಸತ್ಯತೆಯನ್ನು ತಿಳಿಸುತ್ತಾರೆ ಎಂದು

ಆರೀತಿ ಆಗಲಿಲ್ಲ. ಈ ಪತ್ರಿಕೆಗಳಲ್ಲಿ ಬಂದಿರತಕ್ಕಂಥಾದ್ದನ್ನು ಓದಿದರೆ ಯಾರೋ ಮಂತ್ರಿಗಳು ಹೇಳಿ ಬರೆಸಿಬಿಟ್ಟಿರು ಅನ್ನುವ ಅರ್ಥ ಬರುತ್ತದೆ ಶ್ರೀಮಾನ್ ಎಚ್. ಸಿದ್ಧವೀರಪ್ಪನವರನ್ನು ಕಂಡರೆ ಶ್ರೀಮಾನ್ ಚನ್ನಬಸಪ್ಪನವರಿಗೆ ಆಗುವುದಿಲ್ಲ ಆದ್ದರಿಂದ ಅವರು ಹೇಳಿ ಬರೆಸಿರಬೇಕು ಎನ್ನುವ ಸಂಶಯಬರುತ್ತದೆ. ಮುಖ್ಯಮಂತ್ರಿಗಳ ಒಂದು ಟ್ರೆಂಡೇಟ್ ಮತ್ತು ಶ್ರೀಮಾನ್ ಸಿದ್ಧವೀರಪ್ಪನವರ ಒಂದು ಟ್ರೆಂಡೇಟ್ ಮತ್ತು ಡೆಪ್ಯೂಟಿ ಸೆಕ್ರೆಟರಿ ಸಹಿ ಇವೆಲ್ಲಾ ಬರೆಯಬೇಕಾದರೆ, ಇದರಲ್ಲಿ ಸರ್ಕಾರ ಮಾಡುತ್ತಾ ಇರುವಂಥಾ ವ್ಯವಹಾರ ಅವ್ಯವಹಾರ ಅನ್ನುವ ಅರ್ಥದಲ್ಲಿ ಬರೆಯಬೇಕಾದರೆ ಶ್ರೀಮಾನ್ ಸಿದ್ಧವೀರಪ್ಪನವರನ್ನು ತೇಜೋವಧೆ ಮಾಡಿ ಅವರ ವರ್ಚಸ್ಸನ್ನು ಕುಂದಿಸುವ ಪ್ರಯತ್ನ ನಡೆದಿದೆ ಅಂತ ತಿಳಿದುಕೊಳ್ಳಬೇಕಾಗುತ್ತದೆ. ಅಥವಾ ಶ್ರೀಮಾನ್ ಸಿದ್ಧವೀರಪ್ಪನವರಿಗೆ ನೆನಪು ಇದ್ದರೆ ಅವರಿಗೆ ಸಂಬಂಧಪಟ್ಟ ಫೈಲನ್ನು ತರಿಸಿಕೊಂಡು ಈಗ ವಿವರಣೆ ಕೊಡಲಿ. ಇದಕ್ಕೆ ಸಂಬಂಧಪಟ್ಟ ಆರೋಗ್ಯ ಮಂತ್ರಿಗಳು ನಾಳೆ ವಿವರಣೆ ಕೊಡಲಿ. ಈ ಪ್ರತಿಕೆಯಲ್ಲಿ ಯಾರು ಹೇಳಿ ಬರೆಸಿದರು, ಅಥವಾ ಯಾರನ್ನು ಕೇಳಿ ಬರೆದರು, ಅಥವಾ ಡೆಪ್ಯೂಟಿ ಸೆಕ್ರೆಟರಿ ಹೇಳಿ ಬರೆಸಿದರೇ ಅಥವಾ ಮಂತ್ರಿಗಳು ಹೇಳಿ ಬರೆಸಿದರೇ ಅಥವಾ ಶಾಸಕರು ಹೇಳಿ ಬರೆಸಿದರೇ ಅಥವಾ ಮಣಿಪಾಲ್ ಕಾಲೇಜಿನವರು ಹೇಳಿ ಬರೆಸಿದರೇ ಆ ಬಗ್ಗೆ ನಾಳೆ ತೆಗೆದುಕೊಳ್ಳುವುದಕ್ಕೆ ಅನುವು ಮಾಡಿಕೊಡಿ. ಒಬ್ಬರಿಗೊಬ್ಬರಿಗೆ ಜಾಯಿಂಟ್ ರೆಸ್ಪಾನ್ಸಿಬಿಲಿಟಿ ಇರುವುದರಿಂದ ಯಾರು ಹೇಳಿ ಇದನ್ನು ಬರೆಸಿದರು ಅನ್ನುವುದನ್ನು ತಿಳಿದುಕೊಳ್ಳಿ. ಮತ್ತು ಈ ಬಗ್ಗೆ ಪತ್ರಿಕಾ ಪ್ರತಿನಿಧಿಗಳನ್ನಾಗಲಿ ಅಥವಾ ಎಡಿಟರ್‌ನ್ನಾಗಲಿ ಕರೆಸಿ ಇದು ಅವರಿಗೆ ಯಾವರೀತಿ ಬಂತು ಅನ್ನುವುದನ್ನು ತಿಳಿದುಕೊಳ್ಳಿ. ಏತಕ್ಕೆಂದರೆ ಈ ಸುದ್ದಿ ಮೂಲ ಎಲ್ಲಿಂದ ಬಂತು ಅನ್ನುವುದನ್ನು ತಿಳಿಯದೇ ಹೋದರೆ ನಾವು ಪ್ರತಿಕೆಗಳ ಮೇಲೆ ದೋಷಾರೋಪ ಹೊರಿಸುವುಕ್ಕೆ ಈ ಹಕ್ಕು ಭಾದ್ಯತಾ ಸೂಚನೆಯನ್ನು ತಂದಿದ್ದಾರೆ ಅಂತ ಹೇಳಬೇಕಾಗುತ್ತದೆ. ಇದರ ಸತ್ಯಾಸತ್ಯತೆಯನ್ನು ತಿಳಿದುಕೊಂಡು ಇದರ ನಿಜಾಂಶ ಏನಿದೆ ಅನ್ನುವುದನ್ನು ತಿಳಿದುಕೊಂಡು ನಾಳೆ ದಿವಸ ಹೇಳಿಕೆ ಕೊಟ್ಟರೂ ಸರಿ. ಈಗ ಶ್ರೀಮಾನ್ ಚೆನ್ನ ಬಸಪ್ಪನವರು ಈಗತಾನೇ ಸಭೆಗೆ ಬಂದಿದ್ದಾರೆ. ಅವರು ನಾಳೆ ದಿವಸ ಹೇಳಿಕೆ ಕೊಡಲಿ. ಶ್ರೀಮಾನ್ ಸಿದ್ಧವೀರಪ್ಪನವರಾಗಲಿ ಅಥವಾ ಮುಖ್ಯಮಂತ್ರಿಗಳಾಗಲಿ ಯಾವ ಯಾವ ಹಂತದಲ್ಲಿ ಏನೇನು ನಡೆದಿದೆ ಅನ್ನುವುದನ್ನು ನಾಳೆ ದಿವಸ ತಿಳಿದುಕೊಳ್ಳಲಿ. ನಾನು ಮೊದಲೇ ಹೇಳಿದ ಹಾಗೆ ಪ್ರಜಾವಾಣಿ ಮತ್ತು ಡೆಕನ್ ಹೆರಾಲ್ಡ್ ಪ್ರತಿನಿಧಿಗಳನ್ನು ಕರೆಸಿ, ಇದಕ್ಕೆ ಸಂಬಂಧಪಟ್ಟವರನ್ನು ಕರೆಸಿ ಇದರ ಮೂಲ ಎಲ್ಲಿಂದಬಂತು ಅನ್ನುವುದನ್ನು ಅವರೂ ಕರೆಸಿ ತಿಳಿದುಕೊಳ್ಳಲಿ. ಏನೋ ಬರವಣಿಗೆಯಲ್ಲಿ ಬರೆದುಕೊಟ್ಟಿದ್ದಾರೆ ಅನ್ನುವ ಭಾವನೆ ಇರಬಾರದು. ಇದರ ನಿಜವಾದ ಅಂಶಗಳನ್ನು ತಿಳಿದುಕೊಂಡರೆ ಇದು ಪ್ರಿವಿಲೇಜ್ ಆಗುತ್ತದೋ ಇಲ್ಲವೋ ಅಂದು ತಿಳಿದುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ ಎಂದು ಹೇಳುತ್ತೇನೆ. ಇದು ನಿಜವಾಗಿದ್ದರೆ ಇದರಲ್ಲಿ ಹಕ್ಕಿನ ಚ್ಯುತಿ ಪ್ರಶ್ನೆಯೇ ಬರುವುದಿಲ್ಲ. ಇದರಲ್ಲಿ ಕೆಲವರ ಹೆಸರುಗಳನ್ನು ನಮೂದಿಸಿರಬೇಕಾದರೆ ಇದರ ಮೂಲವನ್ನು ಕಂಡು ಹಿಡಿಯಲೇ ಬೇಕು. ಈ ಬಗ್ಗೆ ಏನೇನು ನಡೆಯಿತು ಅನ್ನುವುದರ ಬಗ್ಗೆ ಈ ಕಾರ್ಯಕಲಾಪಗಳೆಲ್ಲಾ ಅಧಿಕೃತವಾಗಿ ದಾಖಲೆಯಾಗಿದೆ. ಅಂದ ಮೇಲೆ ಸಂಬಂಧಪಟ್ಟ ಪತ್ರಿಕೆಗಳವರನ್ನು ಕರೆಸಿ ಇದರ ಮೂಲ ಎಲ್ಲಿಂದ ಬಂತು ಅನ್ನುವುದನ್ನು ತಿಳಿದುಕೊಳ್ಳಬೇಕು. ಅತುರವಾಗಿದ್ದರೆ ಶ್ರೀಮಾನ್ ಚನ್ನಬಸಪ್ಪನವರು ಈಪೊತ್ತೇ ಹೇಳಿಕೆ ಕೊಡಲಿ, ನಂತರ ಇದು ನಿಜವೋ ಅಲ್ಲವೋ ಅನ್ನುವುದು ಗೊತ್ತಾಗುತ್ತದೆ ಆದ್ದರಿಂದ ಸರ್ಕಾರದವರು ಈ ಬಗ್ಗೆ ವಿವರಣೆ ಕೊಡಬೇಕು ಎಂದು ಹೇಳುತ್ತೇನೆ.

SRI H. SIDDAVEERAPPA.—I want to say a few words in augmenting what I have stated. It need not necessarily arrive out of a privilege motion or discussion that has taken place in the House, In the Parliament, very recently we saw a privilege motion was moved against an important person. She was not in the Parliament. But the privilege motion was allowed to be moved.

SRI M. S. KRISHNAN.—I would also like to bring to the notice of the House one particular point which has been mentioned in the Practice and Procedure of Parliament. On page 204 of it reads like this.

"The Committee of Privileges of the House of Commons (U. K.) in the Allighan Case stated.

"......it has long been recognised that the publication of imputations reflecting on the dignity of the House or of any Member in his capacity as such is punishable as a contempt of Parliament. It is true that the imputation upon a member to come within this principle must relate to something which he has done as such that is to say, incidentally to and as part of his service to Parliament............Reflections upon members, however, even where individuals are not named, may be so framed as to bring into disrepute the body to which they belong and such reflections have therefore been treated as equivalent to reflections on the House itself'"
(H. C. 138 1946-47).

That is the position taken in this particular case. The position taken in the 'Prajavani' and 'Deccan Herald' and the actions of the Hon'ble Minister in respect of Manipal College are all matters which come within the purview of this particular case. Because it amounts to casting aspersions. I would say what the Hon'ble Minister Siddaveerappa says should also be included.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ವಿರೋಧ ಪಕ್ಷದ ನಾಯಕರು ಪ್ರಸ್ತಾಪ ಮಾಡಿರತಕ್ಕಂಥಾ ಹಕ್ಕು ಭಾಧ್ಯತಾ ಸೂಚನೆ ಏನು ಇದೆ, ಉದಯವಾಣಿ ಪತ್ರಿಕೆಯಲ್ಲಿ ಸತತವಾಗಿ ಮೂರು ದಿವಸಗಳು ಪ್ರಕಟಣೆ ಅಗಿರತಕ್ಕಂಥಾ ಲೇಖನಗಳ ಬಗ್ಗೆ ಅವರು ಯಾವುದೇ ರೀತಿಯ ಹಕ್ಕುಭಾಧ್ಯತಾ ವಿಷಯವನ್ನು ಇಲ್ಲಿ ಚರ್ಚೆಗೆ ತರುವುದಕ್ಕೆ ಮೊದಲು ರೂಲ್ಸ್ ಆಫ್ ಪ್ರೊಸೀಜರ್‌ನ ರೂಲು ನಂಬರ್ 177ರ ಪ್ರಕಾರ ಒಂದು ಸೂಚನೆಯನ್ನು ಮೊದಲು ಕಳುಹಿಸಬೇಕು. ಆದಕ್ಕೆ ರೂಲ್ ನಂಬರ್ 180ರ ಪ್ರಕಾರ ಕನ್‌ಸೆಂಟ್ ಕೊಟ್ಟರೆ ಮಾತ್ರ ಅದು ಚರ್ಚೆಗೆ ಬರತಕ್ಕಂಥಾ ವಿಷಯವಾಗಿರುತ್ತೆ.

MADAM SPEAKER.—I feel that the matter is in order and I am going to give my consent.

MADAM SPEAKER.—Mr. Deve gowda may seek leave of the House to move his motion.

SRI H. D. DEVEGOWDA.—Madam Speaker, I seek leave of the House to move the following Motion.—

"That the question of privilege arising out of the articles published in the Kannada Daily UDAYAVANI dated 14th,

13th and 14th, be referred to the Committee on privileges with a direction to report within a fortnight from this day."

MADAM SPEAKER.—Have you any objection?

SRI D. DEVARAJ URS.—No.

MADAM SPEAKER.—Leave is granted.

SRI H. D. DEVEGOWDA.—I beg to move the following Motion with the permission of the Chair.—

"That the question of Privilege arising out of the articles published in the Kannada Daily UDAYAVANI dated 12th, 13th and 14th be referred to the Committee on Privileges with a direction to report within a fortnight from this date."

MADAM SPEAKER.—Motion moved.—

"That the question of privilege arising out of the articles published in the Kannada Daily UDAYAVANI dated 12th, 13th and 14th be referred to the Committee On Privileges with a direction to report within a fortnight from this date."

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷಣಿಯವರೆ, ಈಗ ಈ ಸಭೆಯ ಮುಂದೆ ಇನ್ನೊಂದು ಸೂಚನೆ ಇದೆ. ಇದನ್ನು ಪ್ರಿವಿಲೇಜ್ ಕಮಿಟಿಗೆ ಕಳುಹಿಸುವ ಸಲುವಾಗಿ ಸಭೆ ಅನುಮತಿಯನ್ನು ಕೊಟ್ಟಿದೆ. ಪ್ರಿವಿಲೇಜ್ ಕಮಿಟಿಯವರು ಈ ವಿಷಯವನ್ನು ಪರಿಶೀಲನೆ ಮಾಡತಕ್ಕ ಕಾಲದಲ್ಲಿ ಅವರಿಗೆ ಅನುಕೂಲವಾಗಲಿ ಎನ್ನುವ ದೃಷ್ಟಿಯಿಂದ ಕೆಲವು ವಿಷಯಗಳನ್ನು ಈ ಸಂದರ್ಭದಲ್ಲಿ ಪ್ರಸ್ತಾಪ ಮಾಡಲಿಕ್ಕೆ ಇಚ್ಛೆಪಡುತ್ತೇನೆ.

ಮಾನ್ಯ ಅಧ್ಯಕ್ಷಿಣಿಯವರೆ, ಪ್ರಪ್ರಥಮವಾಗಿ ಈಗ ನನ್ನ ಮಾನ್ಯ ಸ್ನೇಹಿತರಾದ ಶ್ರೀಮಾನ್ ಕಕ್ಕಿಲಾಯ ಅವರಿಗೆ ಊಟಕ್ಕೆ ಬರುವ ಸಲುವಾಗಿ ಕೊಟ್ಟಂತಹ ಆಹ್ವಾನ......

SRI S. BANGARAPPA.—I rise to a Point of Order. You have now given your consent under Rule 180. Clause (2) of Rule 180 says.—

"If objection to leave being granted is taken, the Speaker shall request those members who are in favour of leave being granted to rise in their places and if not less than ten members rise accordingly, the Speaker shall intimate that leave is granted. If less than ten members rise, the Speaker shall inform the member that he has not the leave of the Assembly."

Rule 181 says.—

"If leave under rule 180 is granted, the Assembly may consider the question and come to a decision or refer it to

> Committee of Privileges on a motion made either by the member who has raised the question of privilege or by any other member."

According to me, Clause 2 of Rule has not been complied with. You have allowed the discussion to go on. This is incorrect, according to me. Let us go on according to the Rules.

SRI M. S. KRISHNAN.—The hon'ble Member has not seen Rule 181 completely. It says.—

> "The Speaker, if he gives consent under rule 177 and holds that the matter proposed to be discussed is in order, shall, after the questions and before the list of business is entered upon, call the member concerned who shall rise in his place and while asking for leave to raise the question of privilege make a short statement relevant thereto."

Now, the Hon'ble Speaker has agreed to give consent under Rule 177. That is why hon'ble Member Sri H. D. Devegowda has made a short statement. Under rule 181 also, if leave under rule 180 is granted, the Assembly may consider the question and come to a decision. You have given your consent.

ಅಧ್ಯಕ್ಷರು.—ನಾನು ಮಾನ್ಯ ಮುಖ್ಯಮಂತ್ರಿಗಳನ್ನು 'whether there is any objection' ಎಂದು ಕೇಳಿದೆ. ಅದಕ್ಕೆ ಅವರು 'ಇಲ್ಲ' ಎಂದು ಹೇಳಿದರು. I then announced that leave is granted and asked Sri Devegowda to move his motion. Hence sub. rule (2) of Rule 180 will not-apply in this case.

SRI D. DEVARAJ URS.—I think what the hon'ble Speaker has done is correct because in the absence of objection, there was no point. What the hon'ble member said arises only when there is objection. Now that there is no objection, it is alright. Under Rule 181, Madam Speaker, if leave under rule 180 is granted, the Assembly may consider the question and come to a decision, or refer to Committee on Privileges on a motion made either by the member who has raised the question of privilege or by any other member. The question of referring this to a Committee or the question of taking a decision now only is a matter we have to consider at this stage. I do not know what the hon'ble Leader of the Opposition thinks. A matter like this will have to necessarily go to the Committee On Privileges. That is my submission. Perhaps, he too agrees there. I do not know what he wants to do. If it has to be referred to the Committee On Privileges, then, there is not much discussion necessary. I have no objection for the hon'ble Leader of the Opposition saying what he wants to say but this need not

be dragged on. Instead of spending much time on it, I would say that the business of the House can be taken up after he makes some reference.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರೇ, ಈ ಸಭೆಯ ಕಾಲವನ್ನು ನಾನು ಅನಾವಶ್ಯಕವಾಗಿ ತೆಗೆದುಕೊಳ್ಳುವುದಿಲ್ಲ. ಈ ಸದನದ ಪರಿಶೀಲನೆಗಾಗಿ ನಾನು ಏನು ಹಕ್ಕುಭಾದ್ಯತಾ ನಿರ್ಣಯವನ್ನು ನಾನು ಈ ಸಭೆಯ ಮುಂದೆ ಮಂಡಿಸಿದ್ದೇನೆ ಈ ಸಂಬಂಧದಲ್ಲಿ ಕೆಲವು ವಿಷಯಗಳನ್ನು ಈ ಸಭೆಯ ಗಮನಕ್ಕೆ ತರುವುದು ಉಚಿತವೆಂದು ನಾನು ತಿಳಿದುಕೊಂಡಿದ್ದೇನೆ. ತನ್ಮುಖೇನ ಈ ಸಮಿತಿಯವರು ಕೆಲಸ ಮಾಡತಕ್ಕಂಥ ಕಾಲದಲ್ಲಿ ಇದನ್ನು ಸ್ವಲ್ಪ ಆಳವಾಗಿ ವಿಚಾರಣೆ ಮಾಡುವುದಕ್ಕೆ ಅನುಕೂಲವಾಗುತ್ತದೆಂದುಕೊಂಡು ಈ ಕೆಲವು ವಿಷಯಗಳನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ನನ್ನ ಸ್ನೇಹಿತರಾದಂಥ ಮಾನ್ಯ ಕಕ್ಕಿಲಾಯ ಅವರು ಈ ಸದನದಲ್ಲಿ ಒಂದು ಪತ್ರವನ್ನು ಓದಿದರು. ಅದರಲ್ಲಿ ಮಾನ್ಯ ರಮೇಶಪೈ ಅವರು ಆ ಜಿಲ್ಲೆಯ ಶಾಸಕರನ್ನೆಲ್ಲಾ ಭೋಜನ ಕೂಟಕ್ಕೆ ಆಮಂತ್ರಣ ಕೊಟ್ಟು, ಆ ಮೂಲಕ ತಮ್ಮ ಕಾಲೇಜಿನ ಬಗ್ಗೆ ಈ ಶಾಸನ ಸಭೆಯಲ್ಲಿ ಏನು ಚರ್ಚೆ ನಡೆಯಿತು, ಅದರ ಬಗ್ಗೆ ಅವರ ಒಂದು ಬೆಂಬಲವನ್ನು ಗಳಿಸಿಕೊಳ್ಳಲು ಪ್ರಯತ್ನ ಮಾಡಿದ್ದಾರೆ. ಈ ಒಂದು ಪ್ರಯತ್ನದ ಒಂದು ಹಿನ್ನೆಲೆಯಲ್ಲಿ ನಾನು ಒಂದು ಮಾತನ್ನು ಹೇಳುತ್ತೇನೆ. ಅವರು ಊಟಕ್ಕೆ ಕರೆದಿರುವುದು 6ನೇ ತಾರೀಖು ಆದರೆ, 7ನೇ ತಾರೀಖು ಬೆಳಿಗ್ಗೆ ಅವರು ಕೊಟ್ಟಂತಹ ಒಂದು ಪತ್ರಿಕಾ ಹೇಳಿಕೆಯು ಪತ್ರಿಕೆಯಲ್ಲಿ ಬಂದಿದೆ. ಈ ಸಭೆಯ ಕಾರ್ಯಕಲಾಪ 8ನೇ ತಾರೀಖು ಮುಗಿಯುವುದರಲ್ಲಿತ್ತು. ಅಂದೇ ನಾನು ಈ ಬಗ್ಗೆ ಪ್ರಿವಿಲೇಜ್ ಮೋಷನ್ ಮೂವ್ ಮಾಡಬೇಕಾಗಿತ್ತು. ಆದರೆ ನಾನು ಮಾಡಲಿಲ್ಲ. ಅಂದು ನಾನು ನನ್ನ ಕರ್ತವ್ಯಲೋಪ ಮಾಡಿದ್ದೇನೆಂದು ಈಗ ಮನವರಿಕೆಯಾಗಿದೆ. ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ಒಂದು ವಿಷಯವನ್ನು ತರಬಯಸುತ್ತೇನೆ, ಏನೆಂದರೆ, Mr. T. Ramesh Pai, Registrar of the Manipal Academy of Education, ಅವರು ಈ ಸದನದ ಸದಸ್ಯರುಗಳನ್ನು ಭೋಜನ ಕೂಟಕ್ಕೆ ಆಮಂತ್ರಿಸಿ ಏನು ಹೇಳಿದ್ದಾರೆ,—

> "The recent allegations in the State Legislature against the Management of the Kasturba Medical College, Manipal were totally unfounded and highly malacious."

ಎಂದು. ಜೊತೆಗೆ ಅವರು ಅಂದು ನಮ್ಮ ಶಾಸಕರಿಗೆ ಏನು ಹೇಳಿದ್ದಾರೆಂದರೆ, ಈ ಕಸ್ತೂರಿಬಾ ಮೆಡಿಕಲ್ ಕಾಲೇಜಿನ ಬಗ್ಗೆ ಏನು ಕಾಂಟ್ರವರ್ಸಿ ಇದೆ ಅದರ ಬಗ್ಗೆ ಎಲ್ಲ ಪೂರ್ಣ ಮಾಹಿತಿಯನ್ನು ತಿಳಿವಳಿಕೆಯನ್ನು ಕೊಡತಕ್ಕಂಥ ಸನ್ನಿವೇಶದಲ್ಲಿ ನಿಮ್ಮನ್ನು ಕರೆದಿದ್ದೇನೆಂದು ಅವರು ಹೇಳಿರುವುದು ಪತ್ರಿಕೆಯಲ್ಲಿ ಬಂದಿದೆ. ಇದರ ಬಗ್ಗೆ ನಾನು ಹೆಚ್ಚು ಹೇಳಬೇಕಾಗಿಲ್ಲ. ಏಕೆಂದರೆ, ಈ ಸದನದಲ್ಲಿ ನಾವು ಯಾವುದೇ ಒಂದು ವಿಷಯವನ್ನು ಪ್ರಸ್ತಾಪಕ್ಕೆ ತೆಗೆದುಕೊಂಡಾಗ ಅದರ ಬಗ್ಗೆ ಉತ್ತರ ಕೊಡುವುದಕ್ಕೆ ಸರ್ಕಾರಕ್ಕೆ ಸಾಕಷ್ಟು ಶಕ್ತಿ ಇರುತ್ತದೆ. ಆದರೆ ಈ ಸದನದ ಸದಸ್ಯರ ಮೇಲೆ ಒಂದು ರೀತಿಯ ಒತ್ತಡವನ್ನು ತರುವುದರ ಮುಖಾಂತರ ಇಲ್ಲಿ ನಡೆದಂಥ ವಿಚಾರಗಳು ಸರಿಯಲ್ಲವೆಂದು ಅವರು ಮನವರಿಕೆ ಮಾಡಿಕೊಡುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಅವರ ಒತ್ತಡಕ್ಕೆ ಯಾರು ಮಣಿಯುವುದಿಲ್ಲವೋ ಅಂತಹ ವ್ಯಕ್ತಿಗಳ ತೇಜೋವಧೆ ಮಾಡುವುದಕ್ಕೆ ಹೊರಟ್ಟಿದ್ದಾರೆ. 7ನೇ ತಾರೀಖು ಬಂದಂಥ ಈ ಸ್ಟೇಟ್‌ಮೆಂಟ್‌ನ ಬಗ್ಗೆ ಅಂದರೆ ಹಕ್ಕುಭಾದ್ಯತಾ ವಿಷಯಕ್ಕೆ ಸಂಬಂಧಪಟ್ಟಂತಹ ವಿಷಯಗಳನ್ನು ಈ ಸಭೆಯಲ್ಲಿ ಚರ್ಚೆಗೆ ತೆಗೆದುಕೊಳ್ಳಬೇಕಾಗಿತ್ತು, ಆದರೆ ಆಗಲಿಲ್ಲ. 8ನೇ ತಾರೀಖು ಸಭೆಯನ್ನು ಮುಂದೂಡಲಾಯಿತು. ಅನಂತರ ನಾನು ತಮ್ಮ ಕಾರ್ಯಾಲಯದಲ್ಲಿ ವಿಚಾರಿಸಿದೆ, ಈ ಸದನದ ಸದಸ್ಯರ ಮೇಲೆ ಅವರು ಇಂತಹ ಒಂದು ಬೇಜವಾಬ್ದಾರಿಯುತವಾದಂಥ ಹೇಳಿಕೆಯನ್ನು, ಅತಿರೇಖದಿಂದ ಕೂಡಿದಂಥ ಹೇಳಿಕೆಯನ್ನು ಕೊಟ್ಟಿರುವುದರಿಂದ, ಈ ಬಗ್ಗೆ ಹಕ್ಕುಬಾಧ್ಯತಾ ಸೂಚನೆಯನ್ನು ಕಳುಹಿಸಿಕೊಡಬೇಕಾಗುತ್ತದೆಂದು ತಮ್ಮ ಕಾರ್ಯಾಲಯದಲ್ಲಿ ವಿಚಾರಿಸಿದಾಗ, ತಮ್ಮ ಅಧಿಕಾರಿಗಳು ರೀಸೆಂಟ್ ಅಕ್ಕರೆನ್ಸ್ ಎಂಬ ಪದದ ವ್ಯಾಖ್ಯಾನದ ಮೇಲೆ, ಇದು ವಿಳಂಬವಾದ

ಕಾರಣ, ಸ್ಪೀಕರ್ ಅವರು ತಮ್ಮ ಒಪ್ಪಿಗೆ ಕೊಡಲು ತೊಂದರೆಯಾಗುತ್ತದೆಂದು ನನಗೆ ತಿಳಿಸಿದರು. ಈ ಸದನದಲ್ಲಿ ಕೆಲಸ ಮಾಡತಕ್ಕಂಥ ಸದಸ್ಯರುಗಳನ್ನು ಎಲ್ಲ ರೂಪದಲ್ಲಿ ಮಣಿಸಿಕೊಳ್ಳತಕ್ಕಂಥ ಒಂದು ಹವ್ಯಾಸದಲ್ಲಿ ಅವರು ತೊಡಗಿದ್ದಾರೆ. ಅವರ ಒಂದು ಪ್ರಭಾವಕ್ಕೆ ಯಾರು ಮಣಿಯುವುದಿಲ್ಲವೋ ಅಂತಹವರ ತೇಜೋವಧೆ ಮಾಡುವುದಕ್ಕೆ ಅವರು ಪ್ರಯತ್ನ ಮಾಡುತ್ತಿದ್ದಾರೆ. ಇದಕ್ಕೆ ಈ 3 ಲೇಖನಗಳೇ ಸಾಕ್ಷಿ. ಈ ಲೇಖನಗಳನ್ನು ಗಮನದಲ್ಲಿಟ್ಟುಕೊಂಡು ಹಕ್ಕುಬಾಧ್ಯತಾ ಸಮಿತಿಯವರು ಚರ್ಚೆ ಮಾಡಬೇಕಾಗುತ್ತದೆ. ಮತ್ತು ವಿಚಾರ ಮಾಡಬೇಕಾಗುತ್ತದೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ವೈಯಕ್ತಿಕವಾಗಿ ಈ ಬಗ್ಗೆ ನನ್ನ ಅಭಿಪ್ರಾಯ ಹೇಳುವುದಾದರೆ ಇದನ್ನು ಈ ದಿವಸ ಹಕ್ಕುಬಾಧ್ಯತಾ ಸಮಿತಿಗೆ ಕಳುಹಿಸಬೇಕಾಗಿರಲಿಲ್ಲ. ಯಾರು ಈ ಲೇಖನವನ್ನು ಪ್ರಕಟ ಮಾಡಿದಂಥ ಪ್ರಕಾಶಕರು ಇದ್ದಾರೆ, ಅವರನ್ನೇ ಈ ಸದನಕ್ಕೆ ಕರೆಸಿ ಛೀಮಾರಿ ಹಾಕತಕ್ಕಂಥ ಒಂದು ಕೆಲಸವನ್ನು ನಾವು ಮಾಡಬೇಕಾಗಿದೆ ಏಕೆಂದರೆ ಅವರು ಅಷ್ಟು ದೂರ ಹೋಗಿದ್ದಾರೆ. ಆದ್ದರಿಂದ ಅವರು ಈ ಲೇಖನವನ್ನು ಯಾವ ಸಂದರ್ಭದಲ್ಲಿ ಬರೆದಿದ್ದಾರೆಂಬುದನ್ನು ತಿಳಿದುಕೊಳ್ಳಲು ಒಂದು ಅವಕಾಶ ಕೊಡಬೇಕಾಗುತ್ತದೆ. ಆದರೆ ಅವರನ್ನು ಈ ಸದನಕ್ಕೆ ಕರೆಸಿ ವಿಚಾರಣೆ ಮಾಡುವುದಕ್ಕಾಗುವುದಿಲ್ಲ ಎನ್ನುವ ಅಭಿಪ್ರಾಯ ಬಂದಿದೆ. ಅವರು 3 ಪತ್ರಿಕೆಗಳಲ್ಲಿ ಈ ರೀತಿ ಅಗ್ರಲೇಖನವನ್ನು ಪ್ರಕಟ ಮಾಡಿದ್ದಾರೆ ಈ ಲೇಖನಗಳಲ್ಲಿ ಹಲವಾರು ವಿಷಯಗಳಿವೆ. ಆದ್ದರಿಂದ ಅವರ ಅಭಿಪ್ರಾಯ ಪಡೆಯುವುದು ಅವಶ್ಯಕವಿದೆ. ಮಾನ್ಯ ಆರೋಗ್ಯ ಸಚಿವರು ಒಂದು ವಿಷಯವನ್ನು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ, ಏನೆಂದರೆ, ಇದನ್ನು ಹಕ್ಕುಬಾಧ್ಯತಾ ಸಮಿತಿಗೆ ಕಳುಹಿಸಿಕೊಡುವುದು ಒಂದೇ ಮುಖ್ಯವಾದಂಥ ವಿಷಯವಲ್ಲ, ಮತ್ತು ಸಂಬಂಧಪಟ್ಟಂತಹ ವ್ಯಕ್ತಿಗಳಿಗೆ ಈ ಸದನದ ಮೂಲಕ ಶಿಕ್ಷೆ ವಿಧಿಸುವುದು ಒಂದು ಪ್ರಮುಖವಾದಂಥ ವಿಷಯವಲ್ಲ, ಪ್ರಮುಖವಾದಂಥ ವಿಷಯವೇನೆಂದರೆ, ಅವರು ಪ್ರಮುಖವಾದಂಥ 3 ಅಗ್ರಲೇಖನಗಳನ್ನು ಏನು ಪ್ರಕಟ ಮಾಡಿದ್ದಾರೆ, ಅವುಗಳನ್ನು ಪರಿಶೀಲನೆ ಮಾಡಿ ನೋಡುವುದಾದರೆ, ಒಂದು ಲೇಖನದಲ್ಲಿ ಅವರು ಏನು ಹೇಳುತ್ತಾರೆ ಮತ್ತು ಎಷ್ಟು ದೂರ ಹೋಗಿದ್ದಾರೆಂದರೆ.—

> "ಬೆಳಗಾವಿ ಮೆಡಿಕಲ್ ಕಾಲೇಜಿನ ಹುಂಡಿ ಹಗರಣದಿಂದಾಗಿ ಭುಗಿಲೆದ್ದ ಈ ಕಿಡಿಗೆ ತಿಳಿದವರೂ, ತಿಳಿಯದವರೂ ಸೇರಿ ತಂತಮ್ಮ ಪಾಲಿನ ಟೀಕಾಟೂಕೆಗಳ ತರಗೆಲೆಯ ಕಾಣಿಕೆ ನೀಡಿದರು."

ಇದರಿಂದ ನಾವು ಪಾಠ ಕಲಿಯಬೇಕು. ಈ ರಮೇಶಪ್ಪ ಅವರಿಂದ ಅಕ್ರಮವಾಗಿ ಸಂಪಾದನೆ ಮಾಡಿದಂಥ ಹಣವನ್ನು ಸಕ್ರಮನ್ನಾಗಿ ಮಾಡಿಕೊಳ್ಳುವ ಪಾಠವನ್ನು ಕಲಿಯಬೇಕಾಗಿದೆ. ಏಕೆಂದರೆ ಅವರು ಈ ಜಾಗದಲ್ಲಿ ಅವರು ಉಪಯೋಗಿಸಿರುವ ಪದಗಳನ್ನು ನೋಡಿದಾಗ, ಅವರ ಪೆನ್ನು ಸ್ವಲ್ಪ ಹರಿತವಾಗಿದೆ ಇಲ್ಲವೇ ಮೊನಚಾಗಿದೆ ಎಂದು ಹೇಳಬಹುದು ಟೀಕಾಟೂಕೆಗಳ ತರಗೆಲೆಯ ಕಾಣಿಕೆ ಎಂದು ಇಲ್ಲಿ ಹೇಳಿದ್ದಾರೆ. ಅಂದರೆ ಇದರ ಅರ್ಥವನ್ನು ಯಾವ ಡಿಕ್ಷನರಿಯಲ್ಲಿ ನೋಡಬೇಕೋ ಗೊತ್ತಿಲ್ಲ. ಏಕೆಂದರೆ ನನಗೆ ಕನ್ನಡ ಅಷ್ಟು ಚನ್ನಾಗಿ ಬರುವುದಿಲ್ಲ. ಈ ಸದನದಲ್ಲಿ ನಾವು ಸರ್ಕಾರಕ್ಕೆ ಕೊಟ್ಟಂಥ ಸಲಹೆ ಏನಿದೆ, ಅದನ್ನು ಅವರು ಟೀಕಾಟೀಕೆಗಳ ತರಗೆಲೆಯ ಕಾಣಿಕೆ ಎಂದು ವರ್ಣನೆ ಮಾಡಿದ್ದಾರೆ. ನಾನು ಈ ರೀತಿಯ ಅವಹೇಳನಕ್ಕೆ ಗುರಿಯಾಗುವುದಕ್ಕೆ ಸಿದ್ಧನಿಲ್ಲ. ಆದ್ದರಿಂದ ಹಕ್ಕುಬಾಧ್ಯತಾ ಸಮಿತಿಯಲ್ಲಿರತಕ್ಕಂಥ ನನ್ನ ಮಿತ್ರರಲ್ಲಿ ನಾನು ಕೈಜೋಡಿಸಿ ಕೇಳಿಕೊಳ್ಳುವುದೇನೆಂದರೆ, ಅವರು ಈ ವಿಚಾರವಲ್ಲಿ ಕೇವಲ 15 ದಿವಸಗಳಲ್ಲಿ ತಮ್ಮ ವರದಿಯನ್ನು ಕೊಡಬೇಕು, ಅಷ್ಟೇ ಅಲ್ಲ, ಅವರು ತಮ್ಮ ವರದಿ ಕೊಟ್ಟ ಮಾರುದಿನವೇ ಈ ಸದನ ಸೇರುವುದಕ್ಕೆ ತಾವು ಸೂಚನೆ ಕೊಡಬೇಕು ಮತ್ತು ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಸಹ ಒಪ್ಪಬೇಕು ಏಕೆಂದರೆ ತಾವು ಈ ಸದನದಲ್ಲಿ ಆತ್ಮಗೌರವ ಇಟ್ಟುಕೊಂಡು ಕೆಲಸ ಮಾಡಬೇಕಾಗುತ್ತದೆ ಇದಕ್ಕೆ ತಾವು ಒಪ್ಪಿಕೊಳ್ಳದಿದ್ದರೆ ಏನಾಗುತ್ತದೆಂದರೆ, ನಾವು ಈ ಸದನದಲ್ಲಿ ಕೆಲಸ ಮಾಡುವಾಗ ನಾವು ನಮ್ಮ ಹಕ್ಕನ್ನು ಉಳಿಸಿಕೊಳ್ಳಲು ಯಾವುದೇ ರೀತಿಯ ಆಸಕ್ತಿಯನ್ನು ತೋರಿಸುತ್ತಿಲ್ಲವೆನ್ನುವುದನ್ನು ನಾವೇ ಬಹಿರಂಗವಾಗಿ ಪ್ರದರ್ಶನ ಮಾಡಿಕೊಂಡಂತೆ ಆಗುತ್ತದೆ. ಆದ್ದರಿಂದ ಅದಕ್ಕೆ ಅವಕಾಶ ಕೊಡಬಾರದೆಂದು ನಾನು ತಮ್ಮಲ್ಲಿ ಸವಿನಯದಿಂದ ಪ್ರಾರ್ಥನೆ ಮಾಡಿಕೊಳ್ಳುವುದಕ್ಕೆ ಇಷ್ಟಪಡುತ್ತೇನೆ.

ನಾನು ಇನ್ನು ಹೆಚ್ಚು ಕಾಲವನ್ನು ತೆಗೆದುಕೊಳ್ಳುವುದಕ್ಕೆ ಇಷ್ಟಪಡುವುದಿಲ್ಲ. ಸಿದ್ಧಾರ್ಥ ಎನ್ನುವವರ ಹೆಸರಿನಲ್ಲಿ ಈ ಲೇಖನವು ಪತ್ರಿಕೆಯಲ್ಲಿ ಬಂದಿದೆ. ಇದನ್ನು ಪೈ ಅವರೇ ಹೇಳಿರಬೇಕು ಇದರಲ್ಲಿ ಏನು ಹೇಳಿದ್ದಾರೆ ಎಂದರೆ " ಉತ್ಕರ್ಷಕ್ಕೆ ಬಂದದ್ದನ್ನೆಲ್ಲಾ ವಶಪಡಿಸಿಕೊಂಡು ಅದರ ಗುಣಮಟ್ಟವನ್ನು ಸರ್ಕಾರಿ ಮಟ್ಟಕ್ಕೆ ಇಳಿಸುವುದರಲ್ಲಿ ಪಟ್ಟಭದ್ರಹಿತಾಸಕ್ತಿಯುಳ್ಳ ಜನ ಯಾವ ಕಾಲಕ್ಕೂ ಇದ್ದೇ ಇರುತ್ತಾರೆ " ಎಂದು ಹೇಳಿದ್ದಾರೆ. ಅವರು ಇದನ್ನು ವಹಿಸಿಕೊಳ್ಳಬೇಕೆಂದು ಸಲಹೆ ಕೊಟ್ಟಿದ್ದು ವೆಸ್ಟೆಡ್ ಇಂಟರೆಸ್ಟಿನಿಂದ ಎಂದು ಹೇಳಿದ್ದಾರೆ. ಪಟ್ಟಭದ್ರಹಿತಾಸಕ್ತಿಗಳು ದುರುದ್ದೇಶದಿಂದ ಈ ಮೆಡಿಕಲ್ ಕಾಲೇಜನ್ನು ವಹಿಸಿಕೊಳ್ಳಬೇಕು ಎಂದು ಹೇಳಿದ್ದಾರೆಎನ್ನುವ ಮಾತನ್ನು ಅವರು ಹೇಳಿದ್ದಾರೆ.

4-30 P. M.

ಆಮೇಲೆ ಸಿದ್ಧಾರ್ಥಅವರ ಹೆಸರಿನಲ್ಲಿ ಬಂದಿರತಕ್ಕ ಲೇಖನದಲ್ಲಿ ಒಂದು ಕಡೆ ಇಂಥವಕ್ಕೂ ಖಾಸಗೀ ಯತ್ನಗಳಿಗೂ ನೆಲಸಮತಾವಾದದ ಪುರಸ್ಕರ್ತರು ಮಟ್ಟಹಾಕಲು ಎಂದಿನಿಂದಲೂ ಯತ್ನಿಸುತ್ತಲೇ ಬಂದಿದ್ದಾರೆ ಅವರ ಗರ್ಜನೆತರ್ಜನೆಗಳಿಗೆ ಇನ್ನೂ ಸರ್ಕಾರದ ಪೂರ್ತ ಮರುಳಾಗದೆ ಖಾಸಗೀ ಯತ್ನವನ್ನು ಪ್ರೋತ್ಸಾಹಿಸಿಕೊಂಡು ಬಂದದ್ದರಿಂದ ಗ್ರಾಮಾಂತರದ ಜನಗಳಿಗೆ ಒಳ್ಳೆಯ ವೈದ್ಯಕೀಯ ನೆರವು ಸಿಕ್ಕುತ್ತದೆ ಎಂದು ಹೇಳಿದ್ದಾರೆ. ಇದನ್ನು ಇವರು ಹೇಳತಕ್ಕ ಕಾಲದಲ್ಲಿ ನಾವು ಖಾಸಗೀ ರಂಗದಲ್ಲಿ ಸಂಸ್ಥೆಯನ್ನು ಕಟ್ಟುವುದರ ಬಗ್ಗೆ ನಾವು ಕಟು ವಿರೋಧಿಗಳಾಗಿದ್ದೇವೆ ಇಂಥಾ ಸಂಸ್ಥೆಗಳನ್ನು ನೆಲಸಮ ಮಾಡುವುದಕ್ಕೆ ಪ್ರಯತ್ನ ಮಾಡಿದ್ದಾರೆ ಎಂದು ಆರೋಪಣೆ ಮಾಡಿದ್ದಾರೆ. ಈಗ ವಿದ್ಯಾ ರಂಗದಲ್ಲಿ ಅನೇಕ ಖಾಸಗೀ ಸಂಸ್ಥೆಗಳು ಕೆಲಸ ಮಾಡುತ್ತಿವೆ. ಪ್ರೈಮರಿ ಎಜುಕೇಷನ್ನಿನಿಂದ ಹಿಡಿದು ಯೂನಿವರ್ಸಿಟಿ ಎಜುಕೇಷನ್ನಿನವರೆಗೂ ಅನೇಕ ಸಂಸ್ಥೆಗಳನ್ನು ಕಟ್ಟಿ ಬೆಳೆಸುತ್ತಾ ಇರತಕ್ಕಂಥಾ ಅನೇಕ ಸಂಸ್ಥೆಗಳು ವಿದ್ಯಾ ರಂಗದಲ್ಲಿ ಸಾಕಷ್ಟು ಉತ್ತಮ ಕೆಲಸವನ್ನು ಮಾಡುತ್ತಿವೆ ಆದ್ದರಿಂದ ಎಲ್ಲಾ ಸಂಸ್ಥೆಗಳಿಗೂ ಮಸಿ ಬಳಿಯತಕ್ಕ ಕೆಲಸಕ್ಕೆ ಹೋಗುವುದಿಲ್ಲ. ಖಾಸಗೀ ಮೆಡಿಕಲ್ ಕಾಲೇಜುಗಳನ್ನು ಸ್ಥಾಪನೆ ಮಾಡಿ ಜನರ ಸೇವೆಯನ್ನು ಮಾಡತಕ್ಕವರನ್ನು ದಂಡನೆ ಮಾಡಬೇಕು, ತಪ್ಪಿಸಬೇಕು ಎಂದು ನಾವು ಹೇಳಲಿಲ್ಲ ಅವರು ಈ ಸಭೆಯ ವರ್ತನೆಯ ಬಗ್ಗೆ ಕೂಡ ಹೇಳಿದ್ದಾರೆ. ಮೆಡಿಕಲ್ ಕಾಲೇಜುಗಳನ್ನು ನ್ಯಾಷನಲೈಜ್ ಮಾಡುವ ಬಗ್ಗೆ ಈ ಸಭೆಯಲ್ಲಿ ಸಾಕಷ್ಟು ಪ್ರಸ್ತಾಪ ಆಗಿದೆ ಕಳೆದ ಹತ್ತಾರು ವರ್ಷಗಳಿಂದ ಈ ಸಭೆಯಲ್ಲಿ ಆ ಬಗ್ಗೆ ಕಟುವಾದ ಟೀಕೆಗಳು ಬಂದಿವೆ. ಈ ಸಂಸ್ಥೆಗಳು ಉತ್ತಮ ರೀತಿಯಲ್ಲಿ ಕೆಲಸ ಮಾಡುತ್ತಿವೆ. ಅವುಗಳನ್ನು ನೆಲಸಮತಾವಾದ ಮಾಡಬೇಕು ಎಂದು ನಾವು ಹೇಳಲಿಲ್ಲ. ನ್ಯಾಯವಾದ ರೀತಿಯಲ್ಲಿ ನಡೆಯದೆ ಇರತಕ್ಕ ಸಂಸ್ಥೆಗಳು ಎಚ್ಚರಿಕೆಯನ್ನು ವಹಿಸಬೇಕು ಎಂದು ತಿಳಿಸಿದ್ದೇವೆ ಇಂಡಿಯನ್ ಮೆಡಿಕಲ್ ಕೌನ್ಸಿಲ್‌ನವರು ಏನು ಬರೆದಿದ್ದಾರೆ ಎಂಬುದು ಎಲ್ಲರಿಗೂ ಗೊತ್ತಿದೆ ನಾನು ಬಹಳ ನೊಂದ ಮನಸ್ಸಿನಿಂದ ಒಂದು ಮಾತನ್ನು ಹೇಳುತ್ತೇನೆ ಈಗ ಶ್ರೀಮಾನ್ ಪೈ ಅವರ ಅಧಿಕಾರದಲ್ಲಿ ಇಲ್ಲ. ಈಗ ಅವರಿಗೆ ಕಷ್ಟ ಬಂದಿದೆ ಎಂದು ಅಧಿಕಾರದಲ್ಲಿರುವವರನ್ನು ಮೊರೆ ಹೊಕ್ಕಿದ್ದಾರೆ. ವಿಧಾನಸೌಧದ ಮೂಲೆ ಮೂಲೆಯಲ್ಲಿ ತಿರುಗಾಡುತ್ತಿದ್ದಾರೆ. ಬೆಂಗಳೂರಿನಲ್ಲಿರುವ ಉತ್ತಮ ದರ್ಜೆಯ ಹೋಟೇಲುಗಳಲ್ಲಿ ಶಾಸನ ಸಭಾ ಸದಸ್ಯರಿಗೆ ಭೋಜನ ಕೂಟವನ್ನು ಏರ್ಪಡಿಸುವುದರ ಮುಖಾಂತರ ಈ ಒಂದು ಮೆಡಿಕಲ್ ಕಾಲೇಜಿನ ಅವ್ಯವಹಾರಗಳನ್ನು ತಡೆಗಟ್ಟುವುದಕ್ಕೆ ಅವರು ಪ್ರಯತ್ನ ಮಾಡುತ್ತಿದ್ದಾರೆ ಅವರು ಇದರಲ್ಲಿ ಯಶಸ್ವಿಯಾಗುವುದಕ್ಕೆ ಸಾಧ್ಯವಿಲ್ಲ ಆಲ್ ಇಂಡಿಯಾ ಮೆಡಿಕಲ್ ಕೌನ್ಸಿಲ ನವರು ಮಣಿಪಾಲ್ ಮೆಡಿಕಲ್ ಕಾಲೇಜಿಗೆ ಏನು ಒಂದು ಚಜ್ಜೆಯನ್ನು ಕೊಟ್ಟಿದ್ದಾರೆ ಅದು ಮಾನ್ಯ ಮಂತ್ರಿಗಳ ಕಡಿತದಲ್ಲಿ ಇದ್ದರೆ ಅದನ್ನು ಈ ಸಭೆಯ ಗಮನಕ್ಕೆ ತರಬೇಕು ಎಂದು ನಾನು ಹೇಳುತ್ತೇನೆ.

ಆ ಮೇಲೆ ಸರ್ಕಾರದವರು ದಯಮಾಡಿ ಈ ಒಂದು ವಿಷಯವನ್ನು ಗಮನದಲ್ಲಿ ಇಟ್ಟುಕೊಳ್ಳಬೇಕು ಪದೇ ಪದೇ ಹಕ್ಕುಬಾಧ್ಯತಾ ಪ್ರಶ್ನೆಯನ್ನು ಸಾರಿ ಸಾರಿ ಹೇಳಿದ್ದೇನೆ. ಮತ್ತೊಮ್ಮೆ ಮಾನ್ಯ ಆರೋಗ್ಯ ಸಚಿವರ ಗಮನಕ್ಕೆ ತರುತ್ತೇನೆ. " ಮಂಗಳೂರಿನ ಸರ್ಕಾರಿ ಆಸ್ಪತ್ರೆಯ ಸೇವೆಯನ್ನು ನಾವು ಕಾಲೇಜ್‌ಗೆ ಎರವಲು ಕೊಟ್ಟಿದ್ದರಿಂದ ನಮಗೆ ಅದರ ಮೇಲೆ ಹತೋಟಿ ಬೇಕು ಎನ್ನುವಾಗ ಆಸ್ಪತ್ರೆ ಮೆಡಿಕಲ್ ಕಾಲೇಜು ಸಲುವಾಗಿ ಹುಟ್ಟಿದ್ದಲ್ಲವೆಂಬಂಶವನ್ನು ಟೀಕಾ

ಕಾರರು ಮರೆಯುತ್ತಾರೆ '' ಎಂದು ಹೇಳಿದ್ದಾರೆ. ಬೆಳಗಾವ್ ಕಾಲೇಜಿನ ಮೇಲೆ ಏತಕ್ಕೆ ಹತೋಟಿಯನ್ನು ಹಾಕಬೇಕು, ದಾವಣಗೆರೆಯ ಕಾಲೇಜಿನ ಮೇಲೆ ಏತಕ್ಕೆ ಹತೋಟಿ ಹಾಕಬೇಕು ? ಮಂಗಳೂರು ಕ್ಲಿನಿಕಲ್ ಆಸ್ಪತ್ರೆಗೆ ಬೇಕು ಎಂದು ಹತೋಟಿಯನ್ನು ಹಾಕಿದ್ದಾರೆ. ಅವರು ದೊಡ್ಡ ಮನುಷ್ಯರು ಎಂದು ಹತೋಟಿಯನ್ನು ಹಾಕಿದ್ದಾರೆ. ಅವರು ದೊಡ್ಡಮನುಷ್ಯರಾಗಿರುವುದರಿಂದ ಅವರನ್ನು ಬಿಡೋಣ. ಆದರೆ ಎಲ್ಲರಿಗೂ ಒಂದೇ ತತ್ವವನ್ನು ಅನುಸರಿಸಬೇಕು. ಮಂಗಳೂರಿನಲ್ಲಿ ಆಸ್ಪತ್ರೆಯನ್ನು ಕಟ್ಟಿದ್ದು ದಕ್ಷಿಣ ಕನ್ನಡ ಜಿಲ್ಲೆಯ ಹಾಗೂ ಮಂಗಳೂರಿನ ಜನಗಳ ಅನುಕೂಲಕ್ಕೋಸ್ಕರ ಕಟ್ಟಿಸಿದ್ದಾರೆ. ಕ್ಲಿನಿಕಲ್ ಫೆಸಿಲಿಟೀಸ್ ಕೊಡುವುದಕ್ಕೆ ನಿರ್ಣಯ ಮಾಡಿದ್ದು ಒಂದು ಆಧಾರದ ಮೇಲೆ. ಆದ್ದರಿಂದ ಅದರ ಮೇಲೆ ಹತೋಟಿಯನ್ನು ಹಾಕುವುದಕ್ಕೆ ಸರ್ಕಾರಕ್ಕೆ ಅಧಿಕಾರ ಇಲ್ಲ ಎಂದರೆ ಮುಂದೆ ಇವರು ಸರ್ಕಾರದ ಮೇಲೆ ಅಸ್ತ್ರವನ್ನು ಪ್ರಯೋಗ ಮಾಡಬೇಕು ಎಂದು ಭೂಮಿಕೆಯನ್ನು ಸಿದ್ಧ ಮಾಡುತ್ತಿದ್ದಾರೆ ಎಂದು ಗೊತ್ತಾಗುತ್ತದೆ. ಅಗ್ರಲೇಖನದಲ್ಲಿ ಬರೆದು ಸರ್ಕಾರಕ್ಕೆ ಇದರ ಮೇಲೆ ಅಧಿಕಾರ ಇಲ್ಲ ಎನ್ನುವ ಒಂದು ವಾದವನ್ನು ಸಮರ್ಥನೆ ಮಾಡಿಕೊಳ್ಳಲು ಭೂಮಿಕೆಯನ್ನು ತಯಾರು ಮಾಡುತ್ತಿದ್ದಾರೆ ಎನ್ನುವುದನ್ನು ಗಮನದಲ್ಲಿಟ್ಟುಕೊಳ್ಳಬೇಕು. ನಾನು ಕೆಲವು ಗಹನವಾದ ವಿಷಯಗಳನ್ನು ಪ್ರಸ್ತಾಪ ಮಾಡುತ್ತೇನೆ "ಆರೋಗ್ಯ ಸಚಿವರು ತಮ್ಮ ಆಡಳಿತದಲ್ಲಿ ಆಸ್ಪತ್ರೆಯನ್ನು ಸುಧಾರಿಸುವ ಗೋಜಿಗೆ ಹೋಗದೆ ಕೇವಲ ಮೆಡಿಕಲ್ ಕಾಲೇಜಿನ ಪಂರಪರೆಯನ್ನು ರಚಿಸಿಕೊಂಡರು ಅಯ್ಯಾ'' ಎಂದು ಬರೆದಿದ್ದಾರೆ. ಇದನ್ನು ನೋಡಿದರೆ ಶ್ರೀಮಾನ್ ಸಿದ್ಧವೀರಪ್ಪನವರ ಪರಿಸ್ಥಿತಿ ಎಲ್ಲಿಗೆ ಬಂದಿದೆ ಎಂಬುದನ್ನು ಯೋಚನೆ ಮಾಡಬೇಕು. ಇದರ ಬಗ್ಗೆ ಪ್ರಿವಿಲೇಜ್ ಮೋಷನ್ ತೆಗೆದುಕೊಳ್ಳಬೇಕು ಎಂದು ಹೇಳಿದರೆ ಮುಖ್ಯ ಮಂತ್ರಿಗಳು ಬೇಡ ಎಂದು ಹೇಳುತ್ತಾರೆಯೋ ? ಇದರಿಂದ ಯಾರಿಗೆ ಲಾಭವಾಗಿದೆ. ನಾವು ಲಾಭ ಮಾಡಿಕೊಂಡಿದ್ದೇವೆಯೇ ? ಇದರ ಬಗ್ಗೆ ವಿಚಾರಣೆಯಾಗಲಿ. ಬೇಕಾದರೆ ನಮ್ಮ ಮೇಲೆಯೂ ವಿಚಾರಣೆಯಾಗಲಿ. ಪ್ರಿವಿಲೇಜ್ ಕಮಿಟಿಯವರು ನಮ್ಮನ್ನೂ ಕರೆಸಬಹುದು. ನಮ್ಮ ಮೇಲೆ ತನಿಖೆ ಮಾಡಲಿ. ನನ್ನನ್ನು ಶ್ರೀಮಾನ್ ಪೈ ಅವರು ಅಪರಾಧಿ ಸ್ಥಾನದಲ್ಲಿ ಇಟ್ಟಿದ್ದಾರೆ.

ಶ್ರೀ ಎಚ್. ಸಿದ್ಧವೀರಪ್ಪ —ನನ್ನನ್ನು ಇಟ್ಟಿದ್ದಾರೆ.

ಶ್ರೀ ಎಚ್. ಡಿ. ದೇವೇಗೌಡ.—ಯಾವ ಲಾಭಕ್ಕೋಸ್ಕರ ನಾವು ಇದರಲ್ಲಿ ಕೈ ಹಾಕಿದ್ದೇವೆ. ಇವೊತ್ತು ನಮ್ಮ ಮೇಲೆ ಅವರು ನೇರವಾಗಿ ಅಪಾದನೆ ಮಾಡಿದ್ದಾರೆ. ಪ್ರಿವಿಲೇಜ್ ಕಮಿಟಿ ಮುಂದೆ ನಿಂತಾಗ ಅವರು ನಿಮ್ಮ ಮೇಲೆ ಏನೇನು ಹೇಳಿದ್ದಾರೆ ಅದೆಲ್ಲವನ್ನೂ ಹೇಳಬೇಕಾಗುತ್ತದೆ, ತಾವೂ ಕೂಡ ಪ್ರಿವಿಲೇಜ್ ಕಮಿಟಿ ಮುಂದೆ ನಿಲ್ಲಬೇಕಾಗುತ್ತದೆ. ಇದು ಅತೀ ಅವಶ್ಯಕವಿದೆ ಎಂದು ನಾನು ತಿಳಿಸುವುದಕ್ಕೆ ಈ ಸಂದರ್ಭದಲ್ಲಿ ಇಷ್ಟಪಡುತ್ತೇನೆ. ಪ್ರಮುಖವಾದ ವಿಷಯ ನೀವು ಸ್ವಾರ್ಥ ಸಾಧನೆಗೋಸ್ಕರ, ಸ್ವಂತ ಲಾಭಕ್ಕೋಸ್ಕರ ಈ ಸಂಸ್ಥೆಯನ್ನು ಹತೋಟಿಗೆ ತೆಗೆದುಕೊಳ್ಳಲಿಕ್ಕೆ ಹೊರಟಿರಿ ಎಂಬ ಆಪಾದನೆಯನ್ನು ಮಾಡಿದ್ದಾರೆ, ಇದರ ಬಗ್ಗೆ ಕಮಿಟಿ ಮುಂದೆ ನೀವು ವಿವರಣೆಯನ್ನು ಕೊಡಬೇಕಾಗುತ್ತದೆ ಮತ್ತು ಕಮಿಟಿಯವರು ಇದರ ಬಗ್ಗೆ ಕೂಲಂಕುಷವಾಗಿ ಪರಿಶೀಲನೆಮಾಡಬೇಕಾಗುತ್ತದೆ ಎಂದು ನಾನು ಈ ಸಂದರ್ಭದಲ್ಲಿ ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಚನ್ನಬಸಪ್ಪನವರೇ ಎರಡನೇ ಲೇಖಾಂಕದಲ್ಲಿ "ಮೂರು ನಾಲ್ಕು ಕೋಟಿ ರೂಪಾಯಿ ಬಂಡವಾಳದ ಶೈಕ್ಷಣಿಕ ಸ್ಥಾವರಗಳು ಎದ್ದು ನಿಂತಿವೆ" ಎಂದು ಇದೆ 3—4 ಕೋಟಿ ರೂಪಾಯಿಗಳ ಸ್ಥಾವರಗಳು ಎಂದರೆ ಬಿಲ್ಡಿಂಗ್‌ಗಳೇ ಅಥವಾ ಗೋಪುರಗಳೇ, ಯಾವುದು ಪರ್ಮನೆಂಟ್ ಸ್ಟ್ರಕ್ಚರ್ಸ್ ಎದ್ದು ನಿಂತಿದೆ ? ತಮ್ಮ ಹುಕುಂ ಒಂದರಿಂದ ಮಣಿಪಾಲ್ ತನ್ನದೇ ಆದಂಥ ಸಾಹಿತ್ಯವನ್ನು ಪಡೆಯತಕ್ಕ ಹುಕುಂ ಆಯಿತು. ಇದಕ್ಕೆ ಅವಕಾಶ ಕೊಡಬೇಡಿ ಎಂದು ಸರ್ಕಾರಕ್ಕೆ ನಾವು ಒತ್ತಿ ಒತ್ತಿ ಹೇಳಿದೆವು ಇದರಿಂದ ಅವರು ಇವತ್ತು ತಮ್ಮ ಭೂಮಿಕೆಯನ್ನು ತಯಾರು ಮಾಡಿಕೊಂಡಿದ್ದಾರೆ, ಇದು ಅಷ್ಟಕ್ಕೇ ನಿಲ್ಲುವುದಿಲ್ಲ ಇದರಲ್ಲಿ ಯಾರು ಪಾತ್ರಧಾರಿಗಳು ಇದ್ದಾರೆ ಅವರು ಇವತ್ತು ಅಗ್ನಿಪರೀಕ್ಷೆಗೆ ತುತ್ತಾಗಬೇಕಾಗುತ್ತದೆ. 1975—76 ರಲ್ಲಿ ಮಣಿಪಾಲ್ ಮೆಡಿಕಲ್ ಕಾಲೇಜು ಒಂದು ಭಾಗ ಮಂಗಳೂರು ಕೇಂದ್ರ ಒಂದು ಭಾಗ ಎಂದು ಎರಡು ಭಾಗಗಳನ್ನಾಗಿ ಮಾಡಿ ಸೀಟುಗಳನ್ನು ಹಂಚುವುದಕ್ಕೆ ವ್ಯವಸ್ಥೆ ಮಾಡಿದ್ದರಿಂದ ಹಿಡಿದು ಇಲ್ಲಿಯವರೆಗೆ ಏನೇನು ಮೆಡಿಕಲ್ ಕಾಲೇಜಿಗೆ ಸಂಬಂಧಪಟ್ಟಂತೆ ಅನ್ಯಾಯಗಳಾಗಿವೆ ಈ ಅನ್ಯಾಯಗಳನ್ನು ಅಳವಡಿಸಿಕೊಂಡು ಅವರು ಭೂಮಿಕೆಯನ್ನು ಸಿದ್ಧಮಾಡಿಕೊಳ್ಳುತ್ತಿದ್ದಾರೆ. ಆಲ್ ಇಂಡಿಯಾ

ಮೆಡಿಕಲ್ ಕೌನ್ಸಿಲ್ ಆಗಲೀ, ರಾಜ್ಯಸರ್ಕಾರವಾಗಲೀ ಯಾರೇ ಆಗಲೀ ಎಚ್ಚರ ತಪ್ಪಿ ನಡೆದು ಕೊಂಡಿದುದರಿಂದ ಇವತ್ತು 4 ಕೋಟಿ ರೂಪಾಯಿಗಳ ಆಸ್ತಿ ಏನಿದೆ ಇದಕ್ಕೆ ಇನ್ನು ಮುಂದೆ ಮಾಲೀಕರು ಯಾರು ಹೆಚ್ಚಿಗೆ ಗುಂಪಿನವರೆ ಮಾಲೀಕರೇ ಅಥವಾ ಬೇರೆ ಯಾರು ಮಾಲೀಕರು ಎಂಬ ಬಗ್ಗೆ ಸರ್ಕಾರ ತೀವ್ರವಾಗಿ ಆಳವಾಗಿ ಯೋಚನೆ ಮಾಡಬೇಕಾಗುತ್ತದೆ. ಈ ಲೇಖನದಲ್ಲಿ, ' ಮೂರು ನಾಲ್ಕು ಕೋಟಿ ರೂಪಾಯಿ ಬಂಡವಾಳದ ಶೈಕ್ಷಣಿಕ ಸ್ಥಾವರಗಳು ಎದ್ದು ನಿಂತಿವೆ" ಎಂದು ಇದೆ, ಇದನ್ನು ಹಿನ್ನೆಲೆಯಾಗಿಟ್ಟು ಕೊಂಡು ಇದರ ಬಗ್ಗೆ ನಿರ್ಣಯವನ್ನು ಸರ್ಕಾರ ಮಾಡಬೇಕಾಗುತ್ತದೆ. ಈ 4 ಕೋಟಿ ರೂಪಾಯಿಗಳ ಆಸ್ತಿ ಅವರ ಸ್ವಂತದ್ದಲ್ಲ, ವಂತಿಗೆಯಿಂದ ಬಂದಂಥ ಹಣ. ಈ ಕಾಲೇಜಿನಲ್ಲಿ ವ್ಯಾಸಂಗ ಮಾಡಿದಂತಹ ಅನೇಕ ವಿದ್ಯಾರ್ಥಿಗಳು ಯಾರಿದ್ದಾರೋ ಅವರ ಪೋಷಕರು ಕೊಟ್ಟ ರಕ್ತದ ಹಣ. ಸರ್ಕಾರದ ಕಾಲುಜಾರಿದ ಕ್ರಮದಿಂದ ತಮ್ಮದೇ ಆದಂಥ ಹಕ್ಕನ್ನು ಬೆಳೆಸಿ ಕೊಳ್ಳುವ ಹವಣಿಕೆಯಲ್ಲಿ ಕೆಲಸ ಮಾಡುತ್ತಿದ್ದಾರೆ.

ಶ್ರೀ ಡಿ. ದೇವರಾಜ ಅರಸ್.— 4 ಕೋಟಿ ರೂಪಾಯಿಗಳನ್ನು ಯಾವರೀತಿ ಉಪಯೋಗ ಮಾಡಿದ್ದಾರೆ. ಸ್ವಂತಕ್ಕೆ ತೆಗೆದುಕೊಂಡಿದ್ದಾರೆಯೇ ಇಲ್ಲವೇ ಎಂದು ನೋಡಬೇಕಲ್ಲ. ನ್ಯಾಷನಲೈಸ್ ಮಾಡುವ ಮಾತು ಬೇರೆ. ಈ ಹಣ ದುರುಪಯೋಗ ಆಗದೇ ಹೋದರೆ ನಾವು ಏನು ಮಾಡು ವುದಕ್ಕಾಗುತ್ತದೆ.

ಶ್ರೀ ಎಚ್. ಡಿ. ದೇವೇಗೌಡ.— ದುರುಪಯೋಗ ಆಗಿದೆ ಅಥವಾ ಇಲ್ಲ ಎನ್ನುವುದರ ಬಗ್ಗೆ ತನಿಖೆ ಮಾಡಬೇಕಾಗುತ್ತದೆ. ಸರ್ಕಾರಿ ಕಾಲೇಜಿನ ಗುಣಮಟ್ಟಕ್ಕಿಂತ ಉತ್ತಮವಾದುದು ಎಂದು ಹೇಳಿಕೊಂಡು ಹೋಗಿದ್ದಾರೆ. ಸರ್ಕಾರ ತನ್ನ ವಶದಲ್ಲಿರತಕ್ಕಂಥ ಸಂಸ್ಥೆಯ ಗುಣ ಮಟ್ಟವನ್ನು ಹೆಚ್ಚು ಮಾಡಿಕೊಳ್ಳಲಿಕೆ ಅಸಮರ್ಥವಾಗಿದೆಯೆಂದು ಉಲ್ಲೇಖ ಮಾಡಿದ್ದಾರೆ ನಾವುಗಳು ಈ ಸದನದಲ್ಲಿ ಕೂತು ಕೆಲಸಮಾಡತಕ್ಕಂಥ ಜನ ಈ ಒಂದು ಸಂಸ್ಥೆಯಿಂದ ಏನು ಕೆಲವು ಕಾಲೇಜುಗಳನ್ನು ಮಾಡಿದ್ದಾರೆ ಅವನ್ನು ಕೆಡವತಕ್ಕಂಥಾದ್ದಕ್ಕೆ ಹೊರಟಿದ್ದೇವೆ ಎಂದು ಆರೋಪ ಮಾಡಲಿಕ್ಕೆ ಹೊರಟಿದ್ದಾರೆ. ಇದನ್ನು ಮಾನ್ಯ ಮುಖ್ಯ ಮಂತ್ರಿಗಳ ಗಮನಕ್ಕೆ ತರುತ್ತೇನೆ ಇದನ್ನು ಅಂಡರ್ ಲೈನ್ ಮಾಡುತ್ತೇನೆ. '' ಸ್ವಂತ ಪರಿಶ್ರಮದಿಂದ ಕಾಲೇಜನ್ನು ಕಟ್ಟುವ ಯತ್ನ ಮಾಡುತ್ತಿರುವಂತೆ ಅದನ್ನು ಕೆಡವತಕ್ಕ ಯತ್ನ ಕೂಡ ನಡೆದಿದೆ'' ಎಂದು ಇದೆ. ಅಂದರೆ ಈ ಸದನದಲ್ಲಿ ನಾವು ಈ ಕಾಲೇಜುಗಳನ್ನು ನ್ಯಾಷನಲೈಸ್ ಮಾಡಬೇಕು ಎಂದು ಹೇಳಿದೆವೇ ಹೊರತು ಈ ಕಾಲೇಜುಗಳನ್ನು ಕೆಡವಿ ಎಂದು ಯಾರೂ ಹೇಳಲಿಲ್ಲ. ಈ ಕಾಲೇಜುಗಳಲ್ಲಿ ನಡೆಯತಕ್ಕಂಥ ಅವ್ಯವಹಾರಗಳನ್ನು ತಪ್ಪಿಸಬೇಕು, ಖಾಸಗೀ ಸಂಸ್ಥೆಗಳಲ್ಲಿ ಸೀಟುಗಳನ್ನು ಮಾರಾಟಮಾಡು ವಂಥಾದ್ದರ ಬಗ್ಗೆ ರಾಜ್ಯಕ್ಕೆ ಬಂದಿರುವ ಕಳಂಕವನ್ನು ಅಪಕೀರ್ತಿಯನ್ನು ತಪ್ಪಿಸುವುದಕ್ಕೆ ಈ ಕಾಲೇಜುಗಳನ್ನು ನ್ಯಾಷನಲೈಸ್ ಮಾಡಬೇಕು ಎಂದು ಹೇಳಿದ್ದೇವೆ. ಹೆಚ್ಚಿನ ಫೀಸ್ ಬೇಕಾದರೆ 10 ಪರ್ಸೆಂಟ್ ಹೆಚ್ಚು ಮಾಡೋಣ ಎಂದು ನಾನು ಸಲಹೆ ಕೊಟ್ಟೆ ಆದುದರಿಂದ ಈ ಕಾಲೇಜುಗಳನ್ನು ಕೆಡವಲಿಕ್ಕೆ ಹೋದಂಥ ಜನ ನಾವಲ್ಲ ಎಂದು ಈ ಸಂದರ್ಭದಲ್ಲಿ ಸ್ಪಷ್ಟೀಕರಣ ಕೊಡಬೇಕಾಗುತ್ತದೆ. ಅವರು ದಕ್ಷಿಣ ಕನ್ನಡ ಜಿಲ್ಲೆಯ ಜನರಿಗೆ ಕರೆ ಕೊಟ್ಟಿದ್ದಾರೆ. ಈ ಸದನದಲ್ಲಿ ನಾವು ಕಾರ್ಯ ಕಲಾಪ ಮಾಡತಕ್ಕಂಥ ಕಾಲದಲ್ಲಿ ಆ ಸಂಸ್ಥೆಗಳ ಬಗ್ಗೆ ಮಾತನಾಡಿದ್ದಕ್ಕೆ ಆ ಜಿಲ್ಲೆಯ ಜನರಿಗೆ ಕರೆ ಕೊಟ್ಟಿದ್ದಾರೆ ಬಹುಶಃ ನಮ್ಮ ಮೇಲೆ ಯುದ್ಧ ಹೂಡಬೇಕು ಎಂದು ಕಾಣುತ್ತದೆ. ಅವರ ಪದದಲ್ಲೇ ಹೇಳುತ್ತೇನೆ. ' ಆರೋಗ್ಯ ಸಚಿವರಂತೂ ತಮ್ಮ ವೈಯುಕ್ತಿಕ ಬಲಪ್ರದರ್ಶನಕ್ಕೆ ಈ ಕಾಲೇಜುಗಳೇ ತಕ್ಕ ರಂಗಸ್ಥಳ'' ಎನ್ನುವ ಮಾತನ್ನು ಮಾನ್ಯ ಕೃಷ್ಣನ್‌ರವರು ಓದಿ ಹೇಳಿದ್ದಾರೆ ಆದ್ದರಿಂದ ನಾನು ಮಾತ್ರ ಅದನ್ನು ಪುನರುಚ್ಚಾರ ಮಾಡುವುದಿಲ್ಲ. ಆಮೇಲೆ ' ಪಾಲು ಕೇಳಿದ ವರು ಕೆಲವರು ' ಎಂದು ಹೇಳಿದ್ದಾರೆ. ಸ್ವಾಮಿ ನಾನು ಒಬ್ಬ ಪಾಲುದಾರ ಇದರಲ್ಲಿ. ದೇಶದ ಜನಕ್ಕೆ ನಾನು ವಿವರಣೆಯನ್ನು ಕೊಡಬೇಕಾಗುತ್ತದೆ. ದೇವೇಗೌಡರು ಮೆಡಿಕಲ್ ಕಾಲೇಜಿನಲ್ಲಿ ಸೀಟುಗಳನ್ನು ಕೊಡಿಸುವುದರ ಮುಖೇನ ಪೈ ಅವರ ಆಸ್ತಿ ಪಾಲು ಕೇಳಿದ್ದಾರೆಯೇ ? ಇದು ಸ್ವಲ್ಪ ರಾಜಕೀಯದ ಇತಿಹಾಸದಲ್ಲಿ ಬರತಕ್ಕಂಥಾದು ನಿನ್ನೆ ನಾನು ಪ್ರಿವಿಲೇಜ್ ಮೋಷನ್ ಕೊಟ್ಟ ತಕ್ಷಣ ಬೆಂಗಳೂರಿನಲ್ಲಿ ಒಡಾಡುತ್ತಿದ್ದರು. ಬೇರೆ ಶಕ್ತಿಗಳೆಲ್ಲಾ ನನ್ನನ್ನು ನೋಡಿಸಬೇಕು ಎಂದು ಪ್ರಯತ್ನ ಮಾಡಿದರು. ಒಬ್ಬ ಹುಡುಗ ನನ್ನ ಅಡ್ರೆಸ್ ಕೊಟ್ಟಿದ್ದಾನೆ ಎಂದು ಇದರಲ್ಲಿ ಹೇಳಿದ್ದಾರೆ. ಈ ಸದನದಲ್ಲಿ ಕೆಲಸಮಾಡತಕ್ಕಂಥಾ ಕಾಲದಲ್ಲಿ ಅಸತ್ಯ ನುಡಿಯಲಿಕ್ಕೆ ನಾನೇ

ತಯಾರಿಲ್ಲ. ನಾನು 16 ವರ್ಷಗಳಲ್ಲಿ ಶಾಸಕನಾಗಿ ಕೆಲಸ ಮಾಡತಕ್ಕಂಥಾ ಕಾಲದಲ್ಲಿ ನನ್ನ ಕ್ಷೇತ್ರದ 3 ಹುಡುಗರಿಗೆ ಸೀಟುಗಳನ್ನು ಕೊಡಿಸುವುದಕ್ಕೆ ಮಧ್ಯೆ ಪ್ರವೇಶ ಮಾಡಿದ್ದೇನೆ. ಹಿಂದಿನ ಸರ್ಕಾರ ಇದ್ದಾಗ ಒಬ್ಬನಿಗೆ ಬೆಳಗಾಂ ಮೆಡಿಕಲ್ ಕಾಲೇಜಿನಲ್ಲಿ ಸೀಟು ಕೊಡಬೇಕು ಎಂದು ಹೇಳಿದ್ದೇನೆ. ಅದು ಭ್ರಷ್ಟಾಚಾರ ಎಂದರೆ ಆ ಹುಡುಗನ ತಂದೆತಾಯಿಗಳನ್ನು ವಿಚಾರಣೆ ಮಾಡಬೇಕು, ಮಾನ್ಯ ಮುಖ್ಯ ಮಂತ್ರಿಗಳು ಅಲ್ಪಸಂಖ್ಯಾಂತರ ಪ್ರತೀಕ ಎಂದು ಹೇಗೆ ಹೇಳಿಕೊಳ್ಳುತ್ತಾರೋ ಹಾಗೆ ನಾನು ಹೇಳಿಕೊಳ್ಳುವವನಲ್ಲ. ನನ್ನ ಇತಿಮಿತಿಯೊಳಗೆ ಕೆಲಸ ಮಾಡಿದ್ದೇನೆ.

ಶ್ರೀ ಡಿ. ದೇವರಾಜ ಅರಸ್,—ನಾನು ಅಲ್ಪಸಂಖ್ಯಾಂತರ ಪ್ರತೀಕ ಎಂದು ಹೇಳಿಕೊಳ್ಳುತ್ತೇನೆ ಎಂದು ಹೇಳುತ್ತಿದ್ದಾರೆ. ನಾನು ಆ ರೀತಿ ಹೇಳಿಕೊಳ್ಳಲಿಲ್ಲ. ದಯವಿಟ್ಟು ಆ ರೀತಿ ಹೇಳಬೇಡಿ.

ಶ್ರೀ ಎಚ್. ಡಿ. ದೇವೇಗೌಡ — 1972 ರಿಂದೀಚೆಗೆ ಈ ಒಂದು ವಾದ ಬೆಳೆದಿದೆ. ಹಿಂದುಳಿದ ವರ್ಗದವರಿಗೆ, ಅಲ್ಪಸಂಖ್ಯಾತರಿಗೆ ಹೆಚ್ಚು ರಕ್ಷಣೆ ಕೊಡಬೇಕು ಎಂದು ನಡೆದಿದೆ. ಇದನ್ನು ಹೇಳಬೇಕಾಗಿಲ್ಲ, ಮಾಡಬಹುದು. 1970ರಲ್ಲಿ ಮಾತ್ರ ನಾನು ಒಂದು ಸೀಟನ್ನು ಕೊಡಿಸಿದ್ದೇನೆ. ಅತನು ನನ್ನ ಜಾತಿಯವನಲ್ಲ. ಹೊಳೇನರಸೀಪುರದ ಒಬ್ಬ ಖಾಸಗಿ ವೈದ್ಯನ ಮಗ, ಅತನು ಬ್ರಾಹ್ಮಣ ಜಾತಿಗೆ ಸೇರಿದವನು. 'ಏಕೆಂದರೆ ನಾನು ಆ ಕ್ಷೇತ್ರದ ಒಬ್ಬ ಪ್ರತಿನಿಧಿಯಾಗಿ ಇಲ್ಲಿ ಕೆಲಸ ಮಾಡುತ್ತಿದ್ದೇನೆ. ಆದರೆ ನಾನು ವಸೂಲಿಬಾಜಿಯಾಗಿ ಕೆಲಸ ಮಾಡಲು ಸಿದ್ಧನಾಗಿಲ್ಲ, 1972ರಲ್ಲಿ ಒಬ್ಬ ನೇಯ್ಗ ಜಾತಿಗೆ ಸೇರಿದ ಹುಡುಗನಿಗೆ ಸೀಟು ಕೊಡಿ ಎಂಬುದಾಗಿ ಹೇಳಿದ್ದೇನೆ, ಆತ ನನ್ನ ಜಾತಿಯವನಲ್ಲ, ನನ್ನ ಬಂಧುವಲ್ಲ, ಅಥವಾ ನನ್ನ ಮುಂದಿನ ಭಾವಿ ಅಳಿಯನಲ್ಲ. ನಾನು ಯಾವ ಒಂದು ಆಸಕ್ತಿಯಿಂದ ಈ ಮಾತನ್ನು ಹೇಳುತ್ತಿಲ್ಲ. ಈ ಹುಡುಗನ ಬಗ್ಗೆ ಮಾನ್ಯ ಶ್ರೀ ಸಿದ್ಧವೀರಪ್ಪನವರಿಗೆ ಒಂದು ಕಾಗದ ಬರೆದಿದ್ದೆ. ಆಗ ಸರ್ಕಾರ ಇಂತಹ ನಿಯಮಾವಳಿಗಳನ್ನು ಹಾಕಿರಲಿಲ್ಲ. ಆಗ ಕ್ಯಾಪಿಟೇಷನ್ ಫೀಜ್ ಕೊಡಬೇಕೆಂದೂ, ಮೆರಿಟ್ ಹುಡುಗನಿಗೆ ಮಾತ್ರ ಸೀಟು ಕೊಡಬೇಕೆಂದು ಇತ್ತು. ಆದರೆ 1972ರಲ್ಲಿಯೂ ಕ್ಯಾಪಿಟೇಷನ್ ಫೀಜ್ ಇರಲಿಲ್ಲ. ಇದಕ್ಕೆ ಒಂದು ಕಮಿಟಿ ಮಾಡಿದ್ದರೆಂದು ನನಗೆ ಕಾಣುತ್ತದೆ. ಮತ್ತೊಬ್ಬ ಮಹಮ್ಮದೀಯ ಹುಡುಗ. ಅವನಿಗೆ ಮೆಡಿಕಲ್ ಕಾಲೇಜಿನ ಸೀಟಿನ ಬಗ್ಗೆ ಅವರಲ್ಲಿ ಪ್ರಸ್ತಾಪ ಮಾಡಿದ್ದೆ. ಆತ ಹೊಳೇನರಸಿಪುರ ತಾಲ್ಲೂಕಿನ ಒಬ್ಬ ಮುಸ್ಲಿಂ ಬಾಂಧವ. ಹೀಗೆ ಒಬ್ಬ ನೇಯ್ಗಯವ, ಇನ್ನೊಬ್ಬ ಬ್ರಾಹ್ಮಣ, ಮತ್ತೊಬ್ಬ ಮುಸ್ಲಿಂನವ. ಈ ಮೂರು ಹುಡುಗರ ವಿಚಾರದಲ್ಲಿ ಮಾತ್ರ ನಾನು ಹೇಳಿದ್ದೆ. ನಾನು ಯಾವುದೇ ವೈಯಕ್ತಿಕ ಲಾಭಕ್ಕೋಸ್ಕರ ಬರುವವನಲ್ಲ. ನನ್ನ ಚಾರಿತ್ರ ವಧೆ ಮಾಡುವುದಕ್ಕೆ ಬಂದಿದ್ದರಿಂದ ನಿನ್ನೆ ನಿಲುವಳಿ ಸೂಚನೆಯನ್ನು ನಾನು ಕಳುಹಿಸಿದ್ದೇನೆ. ಇದು ಒಂದು ಕತ್ತಲೆಯ ಪ್ರಕರಣವೆಂದು ಪತ್ರಿಕೆಯಲ್ಲಿ ಹೇಳಿದ್ದಾರೆ. ನನ್ನ ಬಗ್ಗೆ ಇಂತಹ ತೇಜೋವಧೆ ಕೆಲಸ ಮಾಡುವವನು ಯಾರೇ ಇರಲಿ ಅವನು ಎಂತಹವನೇ ಇರಲಿ, ಎಷ್ಟೇ ದೊಡ್ಡವನಾಗಿರಲಿ, ಅವನಿಗೆ ನಾನು ತಲೆಬಾಗುವವನಲ್ಲ. ಅವನಿಗೆ ಹಣವಿರಬಹುದು, ಪ್ರಭಾವ ಇರಬಹುದು. ಶಕ್ತಿ ಇರಬಹುದು ; ಆದರೆ ಈ ರೀತಿ ಚಾರಿತ್ರ ವಧೆ ಮಾಡುವ ಅವಿವೇಕಿಗೆ ಈ ಸಭೆಯಲ್ಲಿಯೇ ಛೀಮಾರಿ ಹಾಕಲೇ ಬೇಕು. ಈ ಮಾನ್ಯ ಮುಖ್ಯ ಮಂತ್ರಿಗಳ ಕಾಲದಲ್ಲಿ ನಾವೆಲ್ಲರೂ ಈ ಸದನದಲ್ಲಿ ಕೆಲಸ ಮಾಡುವ ಕಾಲದಲ್ಲಿ, ಈ ಸದನದಲ್ಲಿ ಕೆಲಸ ಮಾಡುವ ಯಾವ ವ್ಯಕ್ತಿಯ ಬಗ್ಗೆ ಆಗಲೀ ಅವಹೇಳನ ಹೇಳಿಕೆ ಕೊಡುವಾಗ ಅವನಿಗೆ ರಕ್ಷಣೆ ಬೇಕು. ಪ್ರಿವಿಲೇಜ್ ಕಮಿಟಿಯವರು ಅವರ ವರದಿಯನ್ನು ಕೊಟ್ಟಮೇಲೆ, ಈ ಸಭೆಗೆ ಅಂತಹವರನ್ನು ಕರೆಸಬೇಕು. ಅವರು ಎಷ್ಟೇ ದೊಡ್ಡವರು ಇರಲಿ, ನಾವು ಯಾವುದೋ ಒಂದು ಇಂತಹ ವಿಧ್ವಂಸಕ ಕೃತ್ಯಕ್ಕೆ ಕೈಹಾಕಿದ್ದೇವೆ ಎಂದು ಹೇಳಿದ್ದಾರೆ. ಅವರು ಹೇಳಿರತಕ್ಕ ಪ್ರತಿಯೊಂದು ಪದವನ್ನೂ ಇಲ್ಲಿ ಇವತ್ತು ಉಲ್ಲೇಖ ಮಾಡುವ ಪ್ರಮೇಯವೇನೂ ಇಲ್ಲ. ಪತ್ರಿಕೆಗಳಲ್ಲಿ ಪ್ರಕಟವಾಗಿರುವ ಅವರ ಈ ಮೂರು ಲೇಖನಗಳನ್ನು ನೋಡಿದರೆ ಈ ಸದನದಲ್ಲಿ ಕೆಲಸ ಮಾಡಲು ನಮಗೆ ಯಾರಿಗೂ ಸರ್ವಸ್ವಾತಂತ್ರ್ಯ ಇಲ್ಲವೆಂದು ಅವರ ಅಗ್ರಲೇಖನಗಳಿಂದಲೇ ಅರ್ಥವಾಗುತ್ತದೆ. ಈ ಸದನದ ಗೌರವ ಕಾಪಾಡಿಕೊಳ್ಳುವುದಕ್ಕೆ, ಈ ಸದನಕ್ಕೆ ಇರುವ ಹಕ್ಕುಬಾಧ್ಯತೆಗಳನ್ನು ಉಳಿಸಿ ಕೊಳ್ಳುವುದರಲ್ಲಿ ಪಕ್ಷಾತೀತವಾದ ಒಂದು ನಿರ್ಣಯವನ್ನು ಈ ಸಭೆಯಲ್ಲಿ ಮಾಡಬೇಕೆಂದು ಈ ಸಂದರ್ಭದಲ್ಲಿ ನಾನು ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಕೈಜೋಡಿಸಿ ಕೇಳಿಕೊಳ್ಳುತ್ತೇನೆ. ಇದೇನೂ ನನ್ನ ಸ್ವಂತಕ್ಕಲ್ಲ.

ಅಲ್ಲಿ ಒಂದು ಮೆಡಿಕಲ್ ಕಾಲೇಜನ್ನೂ ಮತ್ತು ಮೆಡಿಕಲ್ ಯೂನಿವರ್ಸಿಟಿಯನ್ನೂ ಮಾಡಬೇಕೆಂದು ಹೋರಟಿದ್ದು ಮಾನ್ಯ ಶ್ರೀ ಸಿದ್ಧವೀರಪ್ಪನವರನ್ನು ವೈಸ್‌ಚಾನ್ಸಲರಾಗಿ ಮಾಡಬೇಕೆಂದಲ್ಲ. ಈ ಸಭೆಯ ನಿರ್ಣಯದ ಬಗ್ಗೆ ಅಷ್ಟು ಲಘುವಾಗಿ, ಹಗುರವಾಗಿ ಮಾತನಾಡುವುದಿಲ್ಲ. ಈ ಸದನದ ಒಂದು ನಿರ್ಣಯದ ಮೇಲೆ ಕಾನೂನನ್ನು ಈಗಾಗಲೇ ಮಾಡಿದ್ದಾರೆ. ಅದು ಇನ್ನೂ ಕಾನೂನು ಕಟ್ಟಳೆಗೆ ಬರಬೇಕಾದರೆ ಅದಕ್ಕೆ ಆಗಬೇಕಾದ ಕ್ರಮಗಳು ಬೇಕಾದಷ್ಟಿವೆ. ಈ ಸದನದಲ್ಲಿ ನಾವು ಆ ರೀತಿಯಾಗಿ ನಿರ್ಣಯವನ್ನೇನೋ ಮಾಡಿದ್ದೇವೆ, ಅಲ್ಲಿ ಮೆಡಿಕಲ್ ಯೂನಿವರ್ಸಿಟಿಯನ್ನು ಮಾಡಬೇಕೆಂದು ಎಲ್ಲಾ ಕಡೆಯಿಂದಲೂ ಒಕ್ಕೊರಲಿನಿಂದ ಹೇಳಿಕೆ ಬಂದದ್ದರಿಂದ ಆ ರೀತಿಯಾಗಿ ನಿರ್ಣಯ ಮಾಡಿದ್ದೇವೆ. ಈ ಸದನದಲ್ಲಿ ಅದು ಪಾಸಾಗಿದೆ. ಆ ಸದನದ ಸದಸ್ಯರಿಗೆ ಇವತ್ತು ಏನು ನಮ್ಮ ಪ್ರಭಾವದಿಂದ ಇಲ್ಲಿ ಪಾಸಾದ ಈ ಒಂದು ಮಸೂದೆಯನ್ನು ತಡೆಹಿಡಿದ್ದಾರೋ ಅದನ್ನು ಆ ಸದನದಲ್ಲಿಯೂ ಇಟ್ಟರೆ ನಾಳೆ ಅಲ್ಲಿಯೂ ಅದು ಪಾಸಾಗುತ್ತದೆ ನಮಗೆ ಆ ಸದನದ ಹಾಗೂ ಆ ಸದನದ ಹಾಗೂ ಆ ಸದನದ ಸದಸ್ಯರ ಬಗ್ಗೆಯೂ ಗೌರವ ಇದೆ. ಆದರೆ ಇದು ಮಾನ್ಯ ಶ್ರೀ ಚನ್ನಬಸಪ್ಪನವರ ಅಥವಾ ಮಾನ್ಯ ಶ್ರೀ ಸಿದ್ಧವೀರಪ್ಪನವರ ವೈಯಕ್ತಿಕವಾದ ಪ್ರಶ್ನೆಯಲ್ಲ. ಅಲ್ಲಿ ಮೆಡಿಕಲ್ ಯೂನಿವರ್ಸಿಟಿ ಮಾಡಲು ಒಂದು ವೇಳೆ ಮಾನ್ಯ ಮಂತ್ರಿಗಳು ಯಾರೇ ಆಗಲೀ ಕೈ ಹಾಕಿ ಪ್ರಯತ್ನ ಮಾಡದಿದ್ದರೂ ಮಾನ್ಯ ಮುಖ್ಯಮಂತ್ರಿ ಶ್ರೀ ದೇವರಾಜ ಅರಸುರವರ ನಾಯಕತ್ವದಲ್ಲಿ ಅದು ಆಗಲೇ ಬೇಕೆಂದು ನಾನು ಹೇಳುತ್ತೇನೆ.

ಶ್ರೀ ಎಚ್. ಸಿದ್ಧವೀರಪ್ಪ.—ನನ್ನನ್ನು ವೈಸ್‌ಚಾನ್ಸಲರ್ ಆಗಿಮಾಡಿ ಎಂದು ನಾನು ಎಂದೂ ಹೇಳಲಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಆಲ್ ಇಂಡಿಯಾ ಮೆಡಿಕಲ್ ಕೌನ್ಸಿಲ್ ಬಗ್ಗೆ ಹೇಳಿರುವ ಒಂದು ಮಾತನ್ನು ಇಲ್ಲಿ ಹೇಳಬೇಕಾಗಿದೆ. ನಮಗೆ ನ್ಯಾಷನಲೈಜೇಷನ್ ಹವ್ಯಾಸ ಬೇಕಿಲ್ಲ. ಇವತ್ತು ಮೆಡಿಕಲ್ ಎಜುಕೇಷನ್ ನ್ಯಾಷನಲೈಜ್ ಆಗುವುದು, ಮೆಡಿಕಲ್ ಕಾಲೇಜ್ ನ್ಯಾಷನಲೈಜ್ ಮಾಡುವುದು ಹಾಗೂ ಈ ಸಂಸ್ಥೆಗಳನ್ನು ಸರ್ಕಾರ ಹತೋಟಿಯಲ್ಲಿಟ್ಟುಕೊಳ್ಳುವುದು ಹೀಗೆ ಅದಕ್ಕೆ ಸಂಬಂಧಪಟ್ಟ ಹಲವಾರು ವಿಚಾರಗಳ ಬಗ್ಗೆ ನಾವು ಇನ್ನು ಚರ್ಚೆ ಮಾಡಬೇಕೆಂದಿದ್ದೇವೆ. ನನ್ನ ಅಭಿಪ್ರಾಯದಲ್ಲ ಈಗ ಅವ್ಯಾವುದೂ ಚರ್ಚೆಯಾಗಬೇಕಾಗಿಲ್ಲ. ಮೆಡಿಕಲ್ ಯೂನಿವರ್ಸಿಟಿ ಒಂದು ರಚನೆಯಾದರೆ ಆ ಯೂನಿವರ್ಸಿಟಿಯ ಪರಿಮಿತಿಯೊಳಗೇ ಈ ಎಲ್ಲ ಸಂಸ್ಥೆಗಳ ಆಡಳಿತವೂ ಬರುತ್ತದೆಂಬ ಉಲ್ಲೇಖವಾಗಿರುತ್ತದೆ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳಲ್ಲಿ ನನ್ನ ವಿನಂತಿ ಏನೆಂದರೆ ಈ ಸದನದಲ್ಲಿ ಈ ಒಂದು ಮೆಡಿಕಲ್ ಯೂನಿವರ್ಸಿಟಿ ಬಿಲ್ ಪಾಸ್ ಮಾಡಲಾಗಿದೆ. ಅದನ್ನು ಕಾರ್ಯಾಗತ ಮಾಡದೇ ಇರುವುದು ಈ ರಾಜ್ಯದ ಒಂದು ಘನತೆಗೆ, ಹಾಗೂ ಈ ಸಭೆಯ ಗೌರವಕ್ಕೆ ಧಕ್ಕೆ ಬರುತ್ತದೆ. ಕೇಂದ್ರ ಸರ್ಕಾರ ಇದರ ಬಗ್ಗೆ ಇನ್ನೂ ಏನೂ ಹೇಳಲಿಲ್ಲ. ರಾಜ್ಯ ಸರ್ಕಾರ ಕೇಂದ್ರ ಸರ್ಕಾರದ ಜೊತೆಯಲ್ಲಿ ವ್ಯವಹರಿಸಿ. ನಮ್ಮ ಸಹಕಾರವನ್ನು ಅಪೇಕ್ಷೆ ಮಾಡುವುದಾದರೆ ಇವತ್ತಿನ ದಿವಸ ನಾನೇ ನನ್ನ ಸ್ವಂತ ಖರ್ಚಿನಲ್ಲಿ ದೆಹಲಿಗೆ ನಿಮ್ಮ ಸಂಗಡ ಬರುತ್ತೇನೆ. ನನಗೆ ಯಾವ ಟಿ.ಎ ಡಿ.ಎ.ಬೇಡ. ಅದನ್ನೆಲ್ಲಾ ನಾನೇ ಖರ್ಚು ಮಾಡುತ್ತೇನೆ ಅಲ್ಲಿ ಬಂದು ಮಾನ್ಯ ಶ್ರೀ ರಾಜನಾರಾಯಣ್‌ರವರನ್ನು ನೋಡಿ, ಇವತ್ತು ಇಲ್ಲಿ ಒಂದು ಮೆಡಿಕಲ್ ಯೂನಿವರ್ಸಿಟಿ ಮಾಡುವುದಕ್ಕೆ ಯಾವುದೇ ತರಹದ ಅಡ್ಡಿ ತರಕೂಡದು, ಕರ್ನಾಟಕದಲ್ಲಿ ಇಂತಹ ಒಂದು ಒಳ್ಳೆಯ ಕೆಲಸಕ್ಕೆ ರಾಜ್ಯ ಸರ್ಕಾರ ಕೈಹಾಕಿರುವ ಬಗ್ಗೆ ಅಡ್ಡಿ ಬರುವುದು ಬೇಡ; ಇಂತಹ ಒಂದು ಮೆಡಿಕಲ್ ಯೂನಿವರ್ಸಿಟಿ ಮಾಡುವುದಕ್ಕೆ ಪರವಾನೆ ಕೊಡಿ ಎಂದು ನಾನು ಹೇಳುತ್ತೇನೆ. ಈ ರೀತಿಯಾಗಿ ಈ ಸರ್ಕಾರದ ಜೊತೆ ನಾನು ಸಹಕರಿಸುತ್ತೇನೆ. ಏಕೆಂದರೆ ಇದು ಇನ್ನೊಬ್ಬರ ವೈಯಕ್ತಿಕ ಪ್ರಶ್ನೆಯಲ್ಲ ಇದು ಈ ಸದನದ ಪ್ರಶ್ನೆ, ಈ ಸದನದ ನಿರ್ಣಯವನ್ನು ಅಲ್ಲಗಳೆಯುವುದಕ್ಕೆ ಮತ್ತು ಆದನ್ನು ಗಾಳಿಗೆ ತೂರುವುದಕ್ಕೆ ಯಾವ ವ್ಯಕ್ತಿಯಿಂದಲು ಸಾಧ್ಯವಿಲ್ಲ ಇಂತಹ ಪರಿಸ್ಥಿತಿಯಲ್ಲಿ ಯಾವನೋ ಒಬ್ಬ ಪ್ರಭಾವಯುತ ವ್ಯಕ್ತಿ ಇದರ ಬಗ್ಗೆ ತೇಜೋವಧೆಯನ್ನು ಮಾಡಿದ್ದಾನೆ. ಇದಕ್ಕಾಗಿ ಆ ವ್ಯಕ್ತಿಗೆ ನಾವು ಸರಿಯಾದ ಬುದ್ಧಿಯನ್ನು ಕಲಿಸಬೇಕು. ಮಾನ್ಯ ಮುಖ್ಯ ಮಂತ್ರಿಗಳು ಇದರ ಬಗ್ಗೆ ಈ ಸಭೆಗೆ ಈಗಲೇ ಆಶ್ವಾಸನೆ ಕೊಡಬೇಕೆಂದು ತಮ್ಮಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಆದರೆ ಈ ವಿಷಯವನ್ನು ಪ್ರಿವಿಲೇಜ್ ಕಮಿಟಿಗೆ ರೆಫರ್ ಮಾಡುವುದಕ್ಕೆ ಮುಂಚೆ ಮಾನ್ಯ ಮುಖ್ಯಮಂತ್ರಿಗಳು ಈ ಸಭೆಗೆ ಮತ್ತೊಂದು ಆಶ್ವಾಸನೆಯನ್ನು ಕೊಡಬೇಕೆಂದು ನಾನು

ಕೇಳಿಕೊಳ್ಳುತ್ತೇನೆ. ಪ್ರಿವಿಲೇಜ ಸಮಿತಿಯವರು 15 ದಿವಸಗಳೊಳಗೆ ಇದರ ಬಗ್ಗೆ ವರದಿ ಕೊಡಬೇಕು, ಈ ಪತ್ರಿಕೆಯಲ್ಲಿ ಮೆಡಿಕಲ್ ಕಾಲೇಜು ಬಗ್ಗೆ ಲೇಖನ ಬರೆದ ಶ್ರೀ ಸಿದ್ಧಾರ್ಥ ಎಂಬುವರು ಈಗ ಬದುಕಿದ್ದಾರೋ ಇಲ್ಲವೋ ಗೊತ್ತಿಲ್ಲ. ಇಲ್ಲದಿದ್ದರೆ ಅಲ್ಲಿ ಈಗ ಯಾರೇ ಎಡಿಟರ್ ಇರಲಿ, ಅಥವಾ ಅದರ ಪ್ರಕಾಶಕರಿರಲಿ ಅವರನ್ನು ಆ ಕಮಿಟಿಗೆ ಕರೆಸಿ ಈ ವಿಚಾರದಲ್ಲಿ ಅವರೊಡನೆ ದೀರ್ಘವಾಗಿ ಎಲ್ಲ ವಿಷಯಗಳನ್ನು ಚರ್ಚೆ ಮಾಡಬೇಕು. ಆ ಕಮಿಟಿ ರಿಪೋರ್ಟ್ ಬಂದ ತಕ್ಷಣವೇ ಮಾನ್ಯ ಮುಖ್ಯಮಂತ್ರಿಗಳು ಈ ಸದನದ ಜರೂರು ಸಭೆಯನ್ನು ಒಂದು ದಿನದ ಮಟ್ಟಿಗಾದರೂ ಕರೆಯಬೇಕೆನ್ನುವ ಬಗ್ಗೆ ತಾವು ಈ ಸಭೆಗೆ ಆಶ್ವಾಸನವೆ ಕೊಡಬೇಕು. ರಾಜ್ಯಾಂಗದಲ್ಲಿ ಇದಕ್ಕೆ ಸಂಬಂಧಪಟ್ಟ ರೂಲ್ಸ್ ಪ್ರಕಾರ 180 ದಿವಸಗಳೊಳಗೆ ಈ ಸಭೆ ಎಂಥಾದರೂ ಸೇರಬಹುದು ಎಂದು ಇದೆ. ಆದ್ದರಿಂದ ಈ ಸಭೆಯನ್ನು ಮತ್ತೆ ಒಂದು ದಿನ ಕರೆಯುದಕ್ಕೆ ತಾವು ಈಗಲೇ ನಮಗೆ ಒಪ್ಪಿಗೆ ಕೊಡದೇ ಹೋದರೂ, ಎಂದಾದರೂ ಒಂದು ದಿವಸ ಈ ಸಭೆಯನ್ನು ಕರೆದು ಈ ಸಭೆಯ ಕಾರ್ಯಕಲಾಪಗಳನ್ನು ನಿಗದಿ ಮಾಡಬೇಕಾದರೆ, ಮಾನ್ಯ ಮುಖ್ಯಮಂತ್ರಿಗಳು ಮೊದಲು ಅಧ್ಯಕ್ಷರಿಗೆ ಒಂದು ಸೂಚನೆ ಕೊಡಬೇಕಾಗುತ್ತದೆ. ಆದ್ದರಿಂದ ಈ ಸದನದಲ್ಲಿ ಆ ರಿಪೋರ್ಟನ್ನು ಚರ್ಚೆ ಮಾಡಿ ಪರಿಶೀಲನೆ ಮಾಡುವುದಕ್ಕೆ ಒಂದು ದಿನವಾದರೂ ಸಭೆಯನ್ನು ಕರೆಯಲು ತಾವು ಒಪ್ಪಿಗೆ ಸೂಚಿಸಿ ಆಶ್ವಾಸನೆ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಆ ಸಮಿತಿಯಲ್ಲಿ ಕೆಲಸ ಮಾಡುವ ನನ್ನ ಎಲ್ಲಾ ಸಹೋದರರಿಗೂ ಈ ವಿಷಯವನ್ನು ಲಘುವಾಗಿ ಬಿಡಬೇಡಿ ಎಂದು ಅರಿಕೆ ಮಾಡಿಕೊಳ್ಳುತ್ತೇನೆ. ಇದಕ್ಕೆ ಸಂಬಂಧಪಟ್ಟ ವ್ಯಕ್ತಿ ಎಂತಹ ಪ್ರಭಾವಯುತನಾಗಿರಲಿ, ಅವನ ಬಗ್ಗೆ ಸೂಕ್ತ ಕ್ರಮ ತೆಗೆದುಕೊಂಡು ಈ ಸದನದ ಘನತೆಯನ್ನು ಎತ್ತಿ ಹಿಡಿಯುವುದಕ್ಕೆ ಎಲ್ಲರೂ ಸಹಕಾರ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಆ ರಿಪೋರ್ಟ್ 15 ದಿವಸಗಳೊಳಗೆ ಈ ಸಭೆಗೆ ಬರಬೇಕು. ಕೊನೆಯ ಪಕ್ಷ ಒಂದು ದಿನವಾದರೂ ಆ ವರದಿ ಬಗ್ಗೆ ಚರ್ಚಿಸಲು ಈ ಸಭೆಯನ್ನು ಮತ್ತೆ ಕರೆಯಬೇಕು ಏಕೆಂದರೆ ಈ ವಿಚಾರದಲ್ಲಿ ನನಗೆ ಬಹಳ ವೇದನೆ ಇದೆ. ನಾನು ವಿರೋಧ ಪಕ್ಷದ ನಾಯಕನಾಗಿರುವಾಗ, ಮಾನ್ಯ ಶ್ರೀ ದೇವರಾಜ ಅರಸುರವರು ಈ ರಾಜ್ಯದ ಮುಖ್ಯಮಂತ್ರಿಯಾಗಿರುವಾಗ, ತಾವು ಈ ಸಭೆಯ ಅಧ್ಯಕ್ಷಣಿಯಾಗಿರುವಾಗ, ಇಂತಹ ವಿಚಾರ ನಮ್ಮ 216 ಸದಸ್ಯರ ಮೇಲೆ ನಿಜವಾಗಿ ರಿಫ್ಲೆಕ್ಟ್ ಆಗುತ್ತದೆ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳು ಈ ವಿಚಾರದಲ್ಲಿ ಇವತ್ತು ಏನು ಕ್ರಮ ತೆಗೆದುಕೊಳ್ಳುತ್ತಾರೆಂಬ ಬಗ್ಗೆ ಈ ಸಭೆಯ ಮುಂದೆ ಆಶ್ವಾಸನೆಯನ್ನು ಕೊಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

5-00 P. M.

†ಶ್ರೀ ಕೆ. ಪ್ರಭಾಕರ್ (ಗ್ರಾಮಾಭಿವೃದ್ಧಿ ಮತ್ತು ಪಂಚಾಯತಿ ರಾಜ್ಯಶಾಖೆಗಳ ಮಂತ್ರಿಗಳು) ತಾವು ಇದನ್ನು ಈ ಸಭೆಯಲ್ಲಿ ಪ್ರಸ್ತಾಪ ಮಾಡುತ್ತಾ ಇದಕ್ಕೆ ಎಲ್ಲರ ಬೆಂಬಲವನ್ನು ಕೋರುತ್ತಾ ಇದ್ದೀರಿ? ಇದನ್ನು ಪ್ರಿವಿಲೇಜ್ ಕಮಿಟಿಗೆ ಕಳುಹಿಸುವುದಕ್ಕೆ ಯಾರು ಕಳ್ಳಾಟಮಾಡುವುದಿಲ್ಲ. ಇದು ಎಲ್ಲರ ಮೂಲಭೂತ ಹಾಗೂ ಸದಸ್ಯರ ಹಕ್ಕು ಎಂದು ಇದನ್ನು ತಿಳಿಸಿದ್ದೀರಿ ಇನ್ನು ಎರಡನೆಯದು ಯಾವುದೇ ವಿಷಯದಲ್ಲಿ ವ್ಯಕ್ತಿಗಳನ್ನು ದೂರಬಿಟ್ಟು ಕೆಲಸಮಾಡಬೇಕೆಂದು ಹೇಳುತ್ತಾ ಇದ್ದೀರಿ? ಮಾನ್ಯ ಮುಖ್ಯಮಂತ್ರಿಗಳಿಗೆ ಹೆಚ್ಚಿನ ಜವಾಬ್ದಾರಿ ಇದೆಯೆಂದು ಕಾರಣ ಕೊಟ್ಟು ಯಾರೋ ಒಂದು ವ್ಯಕ್ತಿ ಪಾಲುದಾರರು ಎಂದು ಬರೆದಿದ್ದಾರೆಂದು ಹೇಳಿದ್ದೀರಿ ಇವು ಯಾರು ಎಂದು ವಿವರಣೆ ಕೊಟ್ಟರೆ ಒಳ್ಳೆಯದು. ಈ ಸಂಬಂಧದಲ್ಲಿ ಪ್ರಾಸಂಗಿಕವಾಗಿ ಇದರ ಹಿನ್ನೆಲೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ಬಡವರ ಬಂಧು ಎಂದು ಹೇಳಿದ್ದಾರೆಂದು ಹೇಳಿದ್ದೀರಿ. ಅದರ ವಿಚಾರದಲ್ಲಿ ಯಾರೇ ಬಡವರ ವಿಚಾರದಲ್ಲಿ ಅನುಕಂಪದಿಂದ ಬಡವರಿಗೆ ಸಹಾಯಮಾಡಿದ್ದರೆ ಅವರಿಗೆ ರಾಷ್ಟ್ರದಲ್ಲಿ ಮನ್ನಣೆ ಇದ್ದೇ ಇರುತ್ತದೆ. ಅವರ ಚರ್ಯೆಯನ್ನು ಮತ್ತು ಕಾರ್ಯವನ್ನು ದೇಶದ ಜನತೆ ಯಾವತ್ತೂ ಮರೆಯುವುದಿಲ್ಲ. ನೆನೆಸಿಕೊಳ್ಳುವುದು ಉಂಟು ಮಾನ್ಯ ಮುಖ್ಯಮಂತ್ರಿಗಳು ಆಗಲಿ ಯಾರೇ ಆಗಲಿ ಒಳ್ಳೆಯ ಕೆಲಸಮಾಡಿದರೆ ಅವರು ಹೇಳಿದ್ದಕ್ಕೆ ಸೈ ಎನ್ನುತ್ತಾರೆ ಕೇವಲ ಮುಖ್ಯಮಂತ್ರಿಗಳಾದವರು ಏನೇ ಮಾಡಲಿ ನಮ್ಮ ಹಿಂದೆ ಬರಬೇಕೆಂದರೆ ಯಾರು ಬರುವುದಿಲ್ಲ. ಅವರು ತಮ್ಮ ಸ್ವಂತ ತಿಳುವಳಿಕೆಯನ್ನು ಉಪಯೋಗಿಸಿ ಮುಂದೆ ಹೋಗುತ್ತಾರೆ ಅದನ್ನು ತಿಳಿದುಕೊಂಡೇ ಅನುಸರಿಸಬೇಕಾಗುತ್ತದೆ. ಆದ್ದರಿಂದ ಮಾನ್ಯ ದೇವೇಗೌಡರು ಇದಕ್ಕೆ ವಿವರಣೆ ಕೊಡಬೇಕೆಂದು ಹೇಳಿ ಯಾರೋ

ಈ ಯೂನಿವರ್ಸ್ಟಿ ಬಿಲ್ಲಿನಪರ ಮತ್ತು ಯಾರೊ ವಿರೋಧವಿದ್ದರು ಎನ್ನುವ ರೀತಿಯಲ್ಲಿ ಹೇಳಿದ್ದಾರೆ. ಇದಕ್ಕೆ ಯಾರು ಪರ ಮತ್ತು ಯಾರು ವಿರೋಧ ವಿದ್ಧರು ಎನ್ನುವುದಕ್ಕೆ ಸಮಂಜಸವಾದ ವಿವರಣೆ ಯನ್ನು ಅವರು ಕೊಡಬೇಕು.

ಶ್ರೀ ಎಚ್. ಡಿ. ದೇವೇಗೌಡ —ಮಾನ್ಯ ಪ್ರಭಾಕರ್‌ರವರು ಕೇಳಿದ್ದಕ್ಕೆ ನಾನು ಇಷ್ಟು ಹೇಳು ತ್ತೇನೆ. ಮೆಡಿಕಲ್ ಯೂನಿವರ್ಸ್ಟಿ ಬಿಲ್‌ನ್ನು ಪ್ಲೇಟ್ ಮಾಡಿದಾಗ ಮಾನ್ಯ ಸಿದ್ದವೀರಪ್ಪ ನವರು ಇಲಾಖೆಯಲ್ಲಿ ಇದ್ದರು. ಈಗ ಆ ಇಲಾಖೆಯಲ್ಲಿ ಅವರಿಗೆ ಅಧಿಕಾರವಿಲ್ಲ. ಮೆಡಿಕಲ್ ಯೂನಿವರ್ಸಿಟಿ ಬಿಲ್ ಈ ಸದನದಲ್ಲಿ ಚರ್ಚೆಯಾಗಿ ಮೇಲ್ಮನೆಗೆ ಹೋಗಿದೆ. ಆದ್ದರಿಂದ ಮಾನ್ಯ ಚನ್ನ ಬಸಪ್ಪನವರು ಅದರ ಮೇಲೆ ಮುಂದೆ ಗಮನಕ್ಕೆ ತೆಗೆದುಕೊಳ್ಳಬೇಕು. ಈ ಸದನದಲ್ಲಿ ಹಿಂದೆ ಇದರ ಬಗ್ಗೆ ತೀರ್ಮಾನ ಮಾಡಿದ್ದೇವೆ. ಅದು ಕಾರ್ಯರೂಪಕ್ಕೆ ಬರಬೇಕಾದರೆ ಎಲ್ಲರೂ ಸಹಕರಿಸ ಬೇಕು ಇದರ ಬಗ್ಗೆ ಪತ್ರಿಕೆಯಲ್ಲಿಯೂ ಬಂದಿದೆ. ಹಳೆಯ ತಿಕ್ಕಾಟದಿಂದ ಈಗಿನ ಮಂತ್ರಿಗಳಿಗೆ ಈ ಮೆಡಿಕಲ್ ಯೂನಿವರ್ಸ್ಟಿ ಬಿಲ್ಲಿನಲ್ಲಿ ಆಸಕ್ತಿಯಿಲ್ಲವೆಂದು ಹೇಳಿದ್ದಾರೆ. ಆದ್ದರಿಂದ ಈ ಮೆಡಿಕಲ್ ಯೂನಿವರ್ಸ್ಟಿ ಮಾಡುವುದನ್ನು ನಿಲ್ಲಿಸುವುದು ಬೇಡ. ಖಾಸಗಿ ಕಾಲೇಜುಗಳನ್ನು ಹಿಡಿತದಲ್ಲಿಟ್ಟು ಕೊಂಡು ಅದರಲ್ಲಿ ಅವ್ಯವಹಾರಗಳು ನಡೆಸದಂತೆ ಹಿಡಿತದಲ್ಲಿಟ್ಟುಕೊಳ್ಳುವುದಕ್ಕೆ ಮೆಡಿಕಲ್ ಯೂನಿವರ್ಸ್ಟಿ ಇದ್ದರೆ ಒಳ್ಳೆಯದು. ಆದ್ದರಿಂದ ಅದಕ್ಕೇನಾದರೂ ಕೇಂದ್ರಸರ್ಕಾರದ ಅಡ್ಡಿ ಇದ್ದರೆ ಈಗ ಇರರಕ್ಕಂಥ ಕೇಂದ್ರಸರ್ಕಾರಕ್ಕೆ ನಮ್ಮ ಮನವಿಯನ್ನು ಸಲ್ಲಿಸೋಣ. ಮಾನ್ಯ ಮುಖ್ಯ ಮಂತ್ರಿಗಳು ಮತ್ತು ನಾವು ಕೂಡ ನಮ್ಮ ಅಹವಾಲನ್ನು ಕೇಂದ್ರಸರ್ಕಾರದ ಮುಂದೆ ಇಟ್ಟು ಪ್ರಯತ್ನ ಮಾಡೋಣ. ನಾನು ಶಾಸಕನಾಗಿ ನನ್ನ ತಾಲ್ಲೋಕಿನಲ್ಲಿ ಒಬ್ಬ ಮಹಮ್ಮದೀಯ ಹುಡುಗ ನನ್ನ ಹತ್ತಿರ ಬಂದಾಗ ನಾನು ಆ ಮೆಡಿಕಲ್ ಕಾಲೇಜಿನವರಿಗೆ ಒಂದು ಪತ್ರಬರೆದು ನಿಮ್ಮ ಕಾಲೇಜಿ ನಲ್ಲಿ ಒಂದು ಸೀಟು ಕೊಡಿ ಎಂದು ಹೇಳಿರುತ್ತೇನೆ.

ಶ್ರೀ ಡಿ. ದೇವರಾಜ್ ಅರಸ್.—ಮಾನ್ಯ ಅಧ್ಯಕ್ಷರೇ. ಈ ವಿಷಯ ಉದಯವಾಣಿ ಪತ್ರಿಕೆಯಲ್ಲಿ ಮೂರುದಿವಸಗಳಲ್ಲಿ ಮೂರು ಲೇಖನಗಳು ಬಂದಿವೆ. ಈ ರೀತಿಯಾಗಿ ಪತ್ರಿಕೆಯವರು ಬರೆಯಬಾರ ದಾಗಿತ್ತು. ಯಾರ ಮೇಲೆ ಯಾರು ಏನು ಹೇಳಿದರೋ ನನಗೆ ತಿಳಿಯದು. ಆದರೆ ನಾವು ಎಲ್ಲಿಯ ವರೆಗೆ ಈ ಮನೆಯ ಸದಸ್ಯರಾಗಿ ಕೆಲಸ ಮಾಡುತ್ತೇವೆ ಅಲ್ಲಿಯವರೆಗೆ ಈ ಮನೆಯ ಗೌರವವನ್ನು ಕಾಪಾಡತಕ್ಕದ್ದು ಎಲ್ಲಾ ಸದಸ್ಯರ ಹಕ್ಕು. ಯಾರದೋ ಒಂದು ಬೆದರಿಕೆಗಾಗಲೀ, ಒತ್ತಡ ಕ್ಕಾಗಲೀ, ಅಥವಾ ಯಾರಿಗೋ ಸಹಾಯ ಮಾಡತಕ್ಕದ್ದಕ್ಕಾಗಲಿ ಸರ್ಕಾರ ಕೆಲಸ ಮಾಡಿಲ್ಲ ಎಂದು ನಾನು ಸ್ಪಷ್ಟಪಡಿಸುತ್ತೇನೆ.

I do not think the House can direct the Privileges Committee to give the report within 15 days or 20 days. We can only request them to expedite the report. Whatever proposal or the recommendations that come from the Committee, further action will be taken accordingly. Supposing they recommend that the House should take action in the House itself; on this moment I cannot visualise what recommendation they are going to make. I think the Leader of the Opposition will appreciate, I am one with him to take quickest possible action. There is no difference of opinion. With these remarks, I think, the whole House is one with what the Leader of the Opposition says in committing this to the Committee of Privileges.

MADAM SPEAKER.—The motion has to be amended. The motion should be read like this: "This matter may be referred to the Committee of Privilege with a request to report within one month."

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಮುಖ್ಯಮಂತ್ರಿಗಳು ಏನು ನಿಲವು ತೆಗೆದುಕೊಂಡಿದ್ದಾರೆ ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ನಾವು ತಮಗೆ ಕೇಂದ್ರದ ವಿದ್ಯಾಮಂತ್ರಿಗಳ ಮತ್ತು ಆರೋಗ್ಯ ಮಂತ್ರಿಗಳ ಮನ ಒಲಿಸುವುದಕ್ಕೆ ಸಹಕಾರ ಕೊಡುತ್ತೇನೆ ಎಂದು ಹೇಳುತ್ತೇನೆ. ಆದರೆ ಇದು ಮೊದಲು ಪರಿಷತ್ತಿನಲ್ಲಿ ಮಂಜೂರಾತಿಯನ್ನು ಪಡೆಯ ಬೇಕು. ಇದು ಆದನಂತರ ನಮಗೆ ಇದಕ್ಕೆ ಕೇಂದ್ರಸರ್ಕಾರದ ಕ್ಲಿಯರೆನ್ಸ್ ಬೇಕು.

SRI D. DEVARAJ URS.—Unless we know the mind of the Government of India, there is no point in pursuing this question. This was in a way opposed by the Opposition in the Upper House. This is my remembrance.

SRI H. SIDDAVEERAPPA.—What the Opposition Leader said in the other House was: you better consult the Government of India and then bring forward this Bill. They did not oppose the Bill.

SRI D. DEVARAJ URS.—In a way they had understood the mind of the Government of India; indirectly they said have you taken the consent of the Government of India; have you been given permission; unless you bring the permission of the Government of India why do you take up this Bill. It is all in the proceedings. Honestly I did not know what transpired. Only after I contacted the Ministers concerned *viz*, the Health Minister and the Education Minister of the Government of India from them I came to know, they had no mind to give permission. Now I would like to know the mind of the Government of India before I proceed the matter. That is all my point.

ಶ್ರೀ ಎಚ್. ಡಿ. ದೇವೇಗೌಡ.—ಕೇಂದ್ರದಲ್ಲಿ ಯಾವ ಯಾವ ಕಾರಣದಿಂದ ಏನಾಯಿತು. ಎನ್ನುವುದು ಅದೆಲ್ಲಾ ಬೇಡ. Let us make an effort to get through this Bill, The Government of India's clearance is necessary for this Bill. I have already made it clear, we are prepared to co-operate and see that the Union Government clears this Bill so far as this aspect is concerned.

SRI M. S. KRISHNAN.—The Hon. Minister himself has said that he would get the support of Sri Raj Narayan.

SRI D. DEVARAJ URS.—If you give me support, I am prepared to take it.

MADAM SPEAKER.—The question is:

> "That the question of privilege arising out of articles published in the Kannada Daily Udayavani dated 12th, 13th and 14th July 1977 be referred to the Committee of Privileges with a direction to report within a month from this day."

The Motion was unanimously adopted and the matter was referred to the Committee on Privileges.

SRI H. SIDDAVEERAPPA.—I would only say that what is published in the Prajavani and the Deccan Herald is totally false and what is is said there is not borne out by facts. That is all what I would like to say.

Karnataka Certain Inams Abolition Bill, 1977

Motion to Consider

SRI K. H. PATIL (Minister for Food and Forest).— Sir, I beg to move:

> "That the Karnataka Certain Inams Abolition Bill, 1976. be taken into consideration."

MADAM SPEAKAR.—Motion moved:

> "That the Karnataka Certain Inams Abolition Bill, 1976, be taken into consideration."

†SRI K. H. PATIL(Minister for Food and Forest).—Madam Speaker, this is a small Bill. Before the integration there were 10 bills in respect of various areas and this Bill has been prepared with a view to have a consolidated Bill. Certain inams are not covered by any one of the said laws and in this Bill we have tried our level best to cover all the inams and the consolidated bill gives a clear picture. Since other inams are scattered here and there, this comprehensive Bill was found necessary in the interests of the State. From the appointed day the Inam tenure of all these inams stand abolishd. Here we have got tenants. The tenants before 1-3-74 are entitled to be classified as registered occupants. The inamdar who is personally cultivating the land is also to be registered as occupant of such land. The registration of occupancy will be provided in the Land Reforms Act on application made to the Tribunal constituted under the Act. The compensation payable for the abolition of the inam tenures is to be determined with reference to the inams as a whole and not separately for each of the interests therein. The quantum of compensation payable is 10 times the annual income from the lands registered in favour of the tenant plus value of the sandalwood trees and the trees net annual income from different produce. The net annual income is land revenue, jodi, quit rent paid by the inamdar etc. The compensation amount is paid either in cash or by instalments or through bonds.